ಕೊರವಂಜಿ

Koravanji



ಜೂನ್

೧೯೫೫

★

ಸಂಪಾದಕರು :

ಶ್ರೀ॥ ರಾ. ಶಿ

ಬರಹಗಾರರು :

ಶ್ರೀ॥ ಕಾಮತ್
ಶ್ರೀ॥ ಸಾರಥಿ
ಶ್ರೀ॥ ಹಾ ರಾ.
ಶ್ರೀ॥ "ಕೇಫ"
ಶ್ರೀಮತಿ ಪಂಕಜ
ಶ್ರೀ॥ ಅ. ರಾ. ಸೇ.
ಶ್ರೀ॥ ರಾಮಿ
ಶ್ರೀ॥ ಕುಮಾರ
ಶ್ರೀ॥ ಪಾಟಾಳಿ
ಶ್ರೀ॥ ಸೋಮನಾಥ
ಶ್ರೀ॥ ದಾಶರಥಿ ದೀಕ್ಷಿತ್
ಶ್ರೀ॥ ಸೂತ್ರಧಾರಿ

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬಿಡಿಪ್ರತಿ ಕೇವಲ ನಾಲ್ಕಾಣೆ


...ಖಂಡಿತವಾಗಿಯೂ ನಂಬಲರ್ಹವಾದ...
...ನೋಡಲು ಅಂದವಾಗಿರಬೇಕಾದಲ್ಲಿ...
...ಒಳಭಾಗದಲ್ಲಿಯೂ ಮತ್ತು ಹೊರಭಾಗದಲ್ಲಿಯೂ ಉಪಯೋಗಿಸಬೇಕಾದಲ್ಲಿ...
...ಬಣ್ಣಗಳು ಮಿರುಗುತ್ತಿರಬೇಕಾದಲ್ಲಿ...
...ಸಂದೇಹವೇ ಇಲ್ಲ, ಇವುಗಳಿಗೆಲ್ಲಾ ಒಂದೇ ಉತ್ತರ ...ಅತ್ಯುತ್ತಮವಾದ
ಷಾಲಿಮಾರ್ ಸೂಪರ್‌ಲ್ಯಾಕ್
ಬ್ರಷ್ಷಿನಿಂದ ಬಳಿಯಬಹುದು, ಸ್ಪ್ರೇ ಮಾಡಬಹುದು ಅಥವಾ ಬಣ್ಣದಲ್ಲಿ ಅದ್ದಲೂಬಹುದು, ಆಗಿಂದಾಗ್ಗೆ ತೊಳೆದರೂ ಬಣ್ಣ ನಿಲ್ಲುವುದು, ಪ್ರಕಾಶಮಾನವಾದ 38 ಶ್ರೇಷ್ಠ ಬಣ್ಣಗಳಲ್ಲಿ ದೊರಕುವುದು.

ಶೀಘ್ರದಲ್ಲಿಯೇ ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ
ಪ್ರದರ್ಶನವನ್ನು ನಿರೀಕ್ಷಿಸಿ!



ಆರ್. ಆರ್. ಪಿಕ್ಚರ್ಸ್‌ರವರ—

ಗುಲೇಬಕಾವಲಿ

(ತಮಿಳು)

ಜಿ. ವರಲಕ್ಷ್ಮಿ — ಟಿ. ಆರ್. ರಾಜಕುಮಾರಿ

ಎಂ. ಜಿ. ರಾಮಚಂದ್ರನ್

★

A VIJAYA TALKIE RELEASE

ಕೊರವಂಜಿ

ಸಂಪುಟ ೧೪ ಜೂನ್ ೧೯೫೫ ಸಂಚಿಕೆ ೩

ಕುಹಕಿಡಿಗಳು

ಪಂ|| ನೆಹ್ರೂ ಅವರು ಜೂನ್ ತಿಂಗಳಲ್ಲಿ ರಷ್ಯಾಪ್ರವಾಸ ಮಾಡುತ್ತಾರಂತೆ—ಅಂದಮೇಲೆ ಆಗಸ್ಟ್ ಹೊತ್ತಿಗಾದರೂ ಮುಹಮ್ಮದ್ ಅಲಿಯವರು ಪ್ರವಾಸಗೊಳ್ಳಲೇ ಬೇಕಲ್ಲವೇ?

* * *

ಷಣ್ಮುಖ ಮಂತ್ರಿಮಂಡಲವು, ಸಪ್ತಋಷಿ ಮಂಡಲವಾಯ್ತು!

* * *

ರಾಜಾಜಿಯವರು ಇಂಗ್ಲೀಷಿನಲ್ಲಿ ಆಟಂಬಾಂಬುಗಳ ಬಹಿಷ್ಕಾರದ ಮೇಲೆ ಪದ್ಯ ಬರೆಯುತ್ತಿದ್ದಾರಂತೆ.

—ಆಟಂಬಾಂಬ್ ಪದ್ಯಗಳಿಗೆ ಅಮೆರಿಕಾದಲ್ಲಿ ಬಹಿಷ್ಕಾರ!

* * *

ಭಾರತಮಾತೆಯ ಗುಡಿಯಲ್ಲಿ ಭಕ್ತರೆಲ್ಲಾ ಹಿಂದೀ ಗೊಂದಲ ಹಾಕುತ್ತಿದ್ದಾರಂತೆ!!

* *

ಜೈಲುಗಳಲ್ಲಿ ರೇಡಿಯೋಗಳನ್ನು ಖೈದಿಗಳಿಗಾಗಿ ಉಪಯೋಗಿಸುತ್ತಾರಂತೆ. ಇದು ಸೌಲಭ್ಯವೆಂದೋ, ಅಥವಾ ಶಿಕ್ಷಾಕ್ರಮದಲ್ಲೊಂದೋ ತಿಳಿಯಲಿಲ್ಲವಂತೆ.

*   *   *

ದೇಶಕ್ಕಾಗಿ, ಜನತೆಗಾಗಿ, ಎಲ್ಲವನ್ನೂ ತ್ಯಾಗಮಾಡಲು ನಾನು ಸಿದ್ಧ ಎಂದು ಟೋಪಿಯನ್ನು ನೇವರಿಸುತ್ತಾ ಹೇಳಿದಾಗ-ಸಭಿಕನೊಬ್ಬನು ಕೂಗಿ ಕೇಳಿದನಂತೆ- "ಟೋಪಿಯನ್ನು!" ಅಂತ.

*   *   *

ಮಾಲಿಕ್ಯೂಲುಗಳು ದಪ್ಪ ಆದಷ್ಟೂ, ಕಹಿಯಾಗಿ ತೋರುತ್ತವಂತೆ- (ಡಾ|| ಮಾನ್ಕೋರೀಫ್)

—ಮಾಲಿಕ್ಯೂಲುಗಳೇಕೆ?-ಮನುಷ್ಯರೂ ಅಷ್ಟೇ ಅಲ್ಲವೇ!! ಮದುವೆಯಾದ ವರಿಗೆ,

*   *   *

ಕೋಲಾರದಲ್ಲಿ ಆಂಧ್ರರು ಬಂದರೆ-ಕಂಟೋನ್ಮೆಂಟಿನಲ್ಲಿ ಕಜಗಂ ಅವರೇ ಬಂದರಂತೆ.

*   *   *

ಕಾಲುಮೂಳೆ ಮುರಿದುಕೊಂಡು ಆಸ್ಪತ್ರೆಯಲ್ಲಿ ಬಿದ್ದಿದ್ದ ರೋಗಿ, ಮಂಚದಿಂದ ತಿರುಗಿಬಿದ್ದಾಗ ಮೂಳೆಗಳು ಸರಿಯಾಗಿ ಕೂಡಿಕೊಂಡವಂತೆ.

*   *   *

ಹಣಕಾಸಿನ ಸಚಿವ ದೇಶಮುಖರು ಬೆಂಗಳೂರಿಗೆ ಬಂದಿದ್ದಾರೆ.

—ಅವರನ್ನು ನೋಡಲು ಹೋದವರೆಲ್ಲಾ ಬಡತನದ ಸೋಗನ್ನೇ ಹಾಕಿ ಕೊಂಡಿದ್ದಾರೆ—

—ಇಲ್ಲದೆ ಹಣದಕಳ್ಳ ಕಂಡರೆ ತೆರಿಗೆ ಹೆಚ್ಚಿಸುದಲ್ಲವೇ?

*   *   *

ಭಾಷಾವಾರು ಪ್ರಾಂತ್ಯದ ವಿಷಯ, ಕನ್ನಡ ಕಲಿತ ಪಾಲಿಯಾಳಿ ನಾಯಕ ರೊಬ್ಬರು ಅಂದರಂತೆ.

—"ಮೈಸೂರಿನಲ್ಲಿ ಲಿಂಗ ವಿಷ್ಟಿಕ್ ಪ್ರಾಂತ್ಯ ಮಾಡಿದರೆ ಉಳಿದ ಜಾತಿಯೋರ ಪಾಡೇನು" ಅಂತ.

*   *   *

ಉರಿಗಾಳಿ

"ನಿಮ್ಮ ತಾಪತ್ರಯಗಳನ್ನೆಲ್ಲ ಗಂಟು ಮೂಟೆ ಕಟ್ಟಿ ಇರಿಸಿ! ಯೂರೋಪಿಗೆ ಪ್ರವಾಸಮಾಡಿ! ಬನ್ನಿ"–ಎಂದು ಒಂದು ವಿಮಾನ ಕಂಪನಿಯವರು ಜಾಹಿರಾತು ಮಾಡಿದಾರೆ.... ...ಅಲ್ಲಿಗೆ ಹೋಗಿ ಬಂದರೆ ಅಲ್ಲಿಯವರ ತಾಪತ್ರಯ ನಮ್ಮದಕ್ಕಿಂತ ನೂರರಷ್ಟು ಎಂದು ಗೊತ್ತಾಗಿ, ಮನಸ್ಸಿಗೆ ಶಾಂತಿ ದೊರೆಯುವುದು ಖಂಡಿತ, ಎಂದು ಅನೇಕರು ಹೇಳುತ್ತಾರೆ.

* * *

ಚೀನಾಗೆ ಹೋದ ಒಂದು ಭಾರತ ನಿಯೋಗದ ಸದಸ್ಯರೊಬ್ಬರು ಅಲ್ಲಿ ಭಾರತ ರಾಜ್ಯಾಂಗ ಶಾಸನವನ್ನು ಅವಹೇಳನ ಮಾಡಿದರಂತೆ.. ಮತ್ತೆ, ಅಲ್ಲಿ ಚೀಣಾ ರಾಜ್ಯಾಂಗ ಶಾಸನವನ್ನು ಅವಹೇಳನ ಮಾಡಲು ಸಾಧ್ಯವೆ?

* * *

ಪಾಕಿಸ್ತಾನದ ಗವರ್ನರ್ ಜನರಲ್‌ರವರು ವಿಶ್ರಾಂತಿಗಾಗಿ ಯೂರೋಪಿಗೆ ಹೋಗಿದಾರಂತೆ....ಪುಣ್ಯಮಾಡಿದವರು ಅವರು, ಎಂದು ಪ್ರಧಾನಮಂತ್ರಿ ಮಹಮ್ಮದಾಲಿಯವರು ಕರುಬುತ್ತಿದಾರಂತೆ

* * *

ಬೆಂಗಳೂರು ನಗರದ ಇಲೆಕ್ಟ್ರಿಕ್ ದೀಪಗಳು ಗಾಳಿ ಮಳೆಗೇ ಆರಿಹೋಗುತ್ತಿರುವುದೇಕೆ ಎಂದು ಪರೀಕ್ಷಿಸಿ ಈ ಸೋಜಿಗದ ಗುಟ್ಟನ್ನರಿಯಲು ಅಮೇರಿಕಾದಿಂದ ಪ್ರಖ್ಯಾತ ವಿದ್ಯುತ್‌ಶಾಸ್ತ್ರ ಪ್ರವೀಣರೊಬ್ಬರು ಇಷ್ಟರಲ್ಲೇ ಇಲ್ಲಿಗೆ ಬರುತ್ತಾರಂತೆ.

* * *

ಸ್ತ್ರೀಸಮಾಜಗಳಲ್ಲಿ ಎಂಬ್ರಾಯಿಡರಿ ಹೊಲಿಗೆ ಮುಂತಾದುವುಗಳನ್ನು ಕಲಿಸುವುದರಿಂದ ತಮ್ಮ ಮನೆಗಳನ್ನು ಅಲಂಕರಿಸಬಹುದೇ ವಿನಃ, ಅದರಿಂದ ಉತ್ಪತ್ತಿಯೇನು ಹುಟ್ಟಲಾರದು (ಶ್ರೀಮತಿ ದುರ್ಗಾಬಾಯಿ ದೇಶಮುಖ್) ತಮ್ಮ ಮನೆಗಳನ್ನಲ್ಲ, ತಮ್ಮ ತವರುಮನೆಗಳನ್ನು, ಎಂದು ತಿದ್ದಿಕೊಳ್ಳಬೇಕಾಗಿ ವಿನಂತಿ.

* * *

ಕೋರ್ಟಿನ ಕೆಲಸ ಹೆಚ್ಚಾಗಿ ಇಲ್ಲದ ಸುಮಾರು ೧೦೦೦ ಲಾಯರುಗಳನ್ನು ನಾವು ಶಾಲಾ ಕಾಲೇಜುಗಳಲ್ಲಿ ಉಚಿತವಾಗಿ ಪಾಠ ಹೇಳುವಂತೆ ಕೇಳಿಕೊಳ್ಳಬಹುದು (ಮಂತ್ರಿಭಾಷಣ) ಆದರೆ, ಪಾಠ ಹೇಳಲು ಒಪ್ಪಿ, ತಮಗೆ ಕೋರ್ಟಿನ ಕೆಲಸ ಕಮ್ಮಿ ಎಂದು ಪ್ರಕಟಿಸುವ ಧೈರ್ಯ ಯಾವ ಲಾಯರಿಗಿದೆ?

*　　　*　　　*

ಇನ್ನುಮೇಲೆ ಸಂಸ್ಥಾನದ ಶಾಲೆಗಳಲ್ಲಿ ಡ್ರಿಲ್‌ಗೆ ಬದಲು ಭರತನಾಟ್ಯ ಕಲಿಸುತ್ತಾರಂತೆ.... ಭರತನಾಟ್ಯಕ್ಕೆ ಬದಲು, ಯಥಾಪ್ರಕಾರ, ಈಗಿನಂತೆಯೇ ಡ್ರಿಲ್ಲೇ ಮುಂದುವರಿಯುತ್ತದೆ.

*　　　*　　　*

"ಆಡು ಸಾಕು" ಎಂಬ ಕೂಗು, ಇನ್ನು ಸಾಕು ... ಏಕೆಂದರೆ, ಆಡು ಮುಟ್ಟದ ಸೊಪ್ಪಿಲ್ಲ; ಆದ್ದರಿಂದ, ಆಡು ಕಾಡಿನ ವೈರಿ.

*　　　*　　　*

ಸಂಗೀತದಿಂದ ರೋಗಗಳನ್ನು ವಾಸಿಮಾಡುವ ವಿಧಾನವನ್ನು ಮೈಸೂರಲ್ಲಿ ಹಲವರು ಸಂಶೋಧನೆಗಳ ಮೂಲಕ ಕಂಡುಹಿಡಿಯಲು ಪ್ರಯತ್ನಿಸುತ್ತಾರಂತೆ ... ಆದರೆ, ಸಂಗೀತವೆಂಬ ರೋಗವನ್ನು ಹೇಗೆ ವಾಸಿಮಾಡುವುದು? ಅದೇ ಅಲ್ಲವೆ ಭಾರಿ ಸಮಸ್ಯೆ?

*　　　*　　　*

ಶಾಂತಿಯುತ ಸಹಜೀವನದ ತತ್ವದ ಪಂಚ ಶೀಲಗಳನ್ನು ತಮ್ಮ ತಮ್ಮ ಮನೆಗಳಲ್ಲಿ ಹೇಗೆ ಜಾರಿಗೆ ತರುವುದು, ಎಂದು ಗಂಡ ಹೆಂಡಿರು ಯೋಚಿಸಿ ನಿರ್ಧರಿಸಬೇಕು (ಭಾಷಣ) ಗಂಡಂದಿರಿಗೆ ಈ ಪ್ರಶ್ನೆಯೇ ಇಲ್ಲ.... ಪ್ರತಿ ಗಂಡನಿಗೂ ಶಾಂತಿಯುತ ಸಹಜೀವನದ ಗುಟ್ಟು ತಾನಾಗಿಯೇ ಗೊತ್ತಾಗುತ್ತದೆ. ಮೌನಸ್ಯ ಕಲಹಂ ನಾಸ್ತಿ.

*　　　*　　　*

ಅಚ್ಚಕನ್ನಡ ವಾಕ್ಸಂಪತ್ತನ್ನು ಅಭಿವೃದ್ಧಿಗೊಳಿಸಲು ಒಂದು ಸುಲಭೋಪಾಯ ರೈಲ್ವೆ ಪೋರ್ಟರುಗಳಿಗೆ ರೂಲ್ಸ್ ಪ್ರಕಾರದ ಕೂಲಿಯಷ್ಟೇ ಕೊಟ್ಟು, ಅವರ ಭಾಷಣ ಕೇಳುವುದು.

*　　　*　　　*

ರೇಡಿಯೋ ಕಾರ್ಯಕ್ರಮಗಳ ನಡು ನಡುವೆ ಒಂದೆರಡು ನಿಮಿಷಗಳ ವರೆಗಿನ ನಿಶ್ಶಬ್ದತೆ ತೀರ ಅಸಹನೀಯ ಎಂದೊಬ್ಬರು ಬರೆಯುತ್ತಾರೆ.... ... ಕಾರ್ಯಕ್ರಮಗಳು ಮುಗಿಯುವವರೆಗೂ ನಿಶ್ಶಬ್ದತೆ ಇದ್ದರೆ, ಅದು ಸ್ತೋತ್ರಾರ್ಹ, ಅಲ್ಲವೆ?

*　　　*　　　*

ಕೊರವಾವಲೋಕನ

ಅಮಾವಾಸ್ಯೆ ಸಾಯಂಕಾಲ ಕ್ಲಬ್ಬಿಗೆ ಹೊರಟಿದ್ದಾಗ ಆಫೀಸಿನಿಂದ ಹೊರ ಬೀಳುವಾಗಲೇ, ಬೆಕ್ಕನ್ನು ಕಂಡ ನಾಯಿ ಓಡಿಹೋಯ್ತು ರಸ್ತೇಲಿ, ನಾಯನ್ನ ಕಂಡ ಜಟ್ಕಾಕುದುರೆ ಬೆದರಿತು, ಜಟ್ಕಾಕುದುರೆ ಕಂಡ ನಾನು ಹೆದರಿ ರಸ್ತೆ ಪಕ್ಕಕ್ಕೆ ಓಡಿ ಕ್ಲಬ್ಬನ್ನು ಸೇರಿದೆ.

ಇಳಿವಯಸ್ಸು, ಯಮನವಾಹನದಂತಹ ದೇಹರಚನೆ, ಸ್ವಲ್ಪ ಏದುಸಿರು. ಬೇಗ ಕೂತುಕೊಳ್ಳೋಣ ಅಂತ ಹತ್ತಿರ ಇದ್ದ ಕುರ್ಚಿಯಮೇಲೆ ಕುಳಿತೆ. ಮಾತನಾಡಲೂ ಉಸುರಿಲ್ಲ!

ಕೊರವ ಬಂದು ಅದೇ ಮೇಜಿನ ಬಳಿ ಕುಳಿತ. ನನ್ನ ಬೆವರು ಮುಖ, ತಿದಿ ಒತ್ತಿದಂತಿದ್ದ ಉಚ್ಛ್ವಾಸ, ನಿಶ್ವಾಸ, ನೋಡಿ, ತಾನೂ ಮಾತನಾಡದೇ ಕುಳಿತ. ಉಪ್ಪೇರಿಗೆ ಆರ್ಡರ್ ಕೊಟ್ಟೆ. ಒಂದು ಖಾಲಿ ತಟ್ಟೆಯೂ ಬೇಕೆಂದ.

ಮೈಯೆಲ್ಲಾ ಬುಸುಗುಟ್ಟುತ್ತಿದ್ದರೂ ಕಣ್ಣೇನೂ ಸುಸ್ತಾಗಿರಲಿಲ್ಲ. ನೋಡುತಾನೇ ಇದ್ದೆ. ಹಸೆಮೇಲಿನ ಮದುವಣಿಗ ಪುರೋಹಿತನನ್ನೇ ನೋಡುವಂತೆ—

ಉಪ್ಪೇರಿ ಬಂತು. ಖಾಲಿ ತಟ್ಟೇನೂ ಬಂತು. ಖಾಲಿ ತಟ್ಟೇಲಿ ಒಂದೊಂದೇ ಉಪ್ಪೇರಿಯನ್ನು ಸಾಲಾಗಿ ಇರಿಸಿದ ಕೊರವ. ಸಾಲಿಗೆ ಆರು, ಹೀಗೆ ಮೂರು ಸಾಲಾಯಿತು ಇದ್ದ ಉಪ್ಪೇರಿ. ಸಾದು, ಗೋದು, ಫಿರಂಗಿ, ಲಾಟ್ಮೆ, ಲೂಟ್ಮೆ— ಚಲ್ ಎಂತ ಮೊದಲ ಉಪ್ಪೇರಿಯಿಂದ, ಆರನೇ ಉಪ್ಪೇರಿತನಕ, ಒಂದೊಂದನ್ನೂ ಬೆರಳಲ್ಲಿ ಮುಟ್ಟಿ, ಆರನೆಯ ಉಪ್ಪೇರಿಯನ್ನು ಮುಟ್ಟಿ ಚಲ್ ಎಂದಾಗ ಅದನ್ನು ತಿನ್ನ ಹತ್ತಿದ. ಇದ್ದ ಉಪ್ಪೇರಿಯನ್ನೆಲ್ಲಾ ಮುಗಿಸುವವೇಳೆಗೆ ೧೫ ನಿಮಿಷಗಳಾದುವು.

ಆ ಹೊತ್ತಿಗೆ ನನ್ನ ಉಸಿರು ಬಂದಿತ್ತು ಬೆವರು ನಿಂತಿತ್ತು. "ಏನೋ! ಮಕ್ಕಳಾಟ ಇದು!" ಎಂದು ಕೇಳಿದೆ ಕೊರವನನ್ನು. ತಟ್ಟೇಲಿದ್ದ ಚೂರು ಉಪ್ಪೇರಿಯಿಂದ, ಹಲ್ಲಿನ ಸಂದೀಲಿ ಸಿಕ್ಕಿದ್ದ ಇನ್ನೊಂದು ತುಣುಕು ಉಪ್ಪೇರಿಯನ್ನು ತೆಗೆಯುತ್ತಿದ್ದ ಕೊರವ, ಕಡೆಗೆ ಹಲ್ಲಿನ ಸಂದೀಲಿ ಎರಡು ತುಣುಕುಗಳಾದಾಗ, ಅವೆರಡನ್ನೂ ಬೆಂಕಿಕಡ್ಡಿಯ ತಪ್ಪುತುದಿಯಿಂದ ತೆಗೆದು, ನಂತರ ನನಗೆ ಹೇಳಿದ.

"ಈ ದಿನ ಅಕೌಂಟೆಂಟ್ ಜನರಲ್‌ರವರ ಕಚೇರಿಗೆ ಹೋಗಿದ್ದೆ. ನೂರು ವರ್ಷದ ಹಿಂದಿನ ಹಳೇ ಲೆಕ್ಕದ ಕಾಗದಗಳನ್ನು ಬೆಂಕಿಗೆ ಹಾಕಿ ಎಂದು ಆರ್ಡರಾಗಿತ್ತಂತೆ ಕಾರಣ ಬೀರುಗಳನ್ನು ಮೇಜುಗಳನ್ನು ಖಾಲಿಮಾಡಲು. ಅಕಾರಾದಿಯಾಗಿ ಅವನ್ನೆಲ್ಲಾ ಸರಿಗೂಡಿಸಿ ನಂತರ ಬೆಂಕಿಗೆ ಹಾಕಬೇಕೆಂದು, ಅಲ್ಲಿನ ಅಧಿಕಾರಿಯ ಅಪ್ಪಣೆಯಾಗಿತ್ತಂತೆ. ನಾಲ್ಕುಜನ ಸೂಪರಿಂಟೆಂಡರು, ಹದಿನಾಲ್ಕು ಜನ ಮೊದಲ ದರ್ಜೆ ನೌಕರರು, ನಾಲ್ವತ್ತುನಾಲ್ಕು ಜನ ಎರಡನೆದರ್ಜೆ ನೌಕರರು, ನೂರಾನಲ್ವತ್ತುನಾಲ್ಕುಜನ ಕೆಳಸಿಬ್ಬಂದಿಯರು, ಈ ಕೆಲಸದಲ್ಲಿ ನಿರತರಾಗಿದ್ದರು. "ಇನ್ನೇನು ಮೂರು ತಿಂಗಳಿನಲ್ಲಿ ಈ ಕೆಲಸ ಮುಗಿಯುತ್ತೆ. ಅಕಾರಾದಿಯಾಗಿ ಶೇಖರಿಸಿಟ್ಟ, ಈ ಕಾಗದ ಪತ್ರಗಳನ್ನು ನವೆಂಬರ್ ಒಂದಕ್ಕೆ ಕಾಮದಹನ ಮಾಡುತ್ತೇವೆ. ಆ ಸಮಾರಂಭಕ್ಕೆ ಆಗ ಯಾರು ಹಣಕಾಸಿನ ಸಚಿವರೋ ಅವರನ್ನು ಆಹ್ವಾನಿಸಿ, ಅವರ ಅಮೃತಹಸ್ತದಲ್ಲೇ ಬೆಂಕಿ ಇರಿಸಬೇಕೆಂದು ಯೋಚಿಸಿದ್ದೇವೆ" ಎಂದು ಆ ಸಂಸ್ಥೆಯ ಐ.ಎ.ಎಸ್. ಅಧಿಕಾರಿ ಹೇಳಿದ.

ಅದನ್ನು ಕೇಳಿ ಹಿಂತಿರುಗಿದಮೇಲೆ ನನಗನ್ನಿಸಿತು. ಉಪ್ಪೇರಿ ತಿನ್ನುವಾಗ, ಅದೇರೀತಿ ಒಂದು ವ್ಯವಸ್ಥೆಮಾಡಿ ಎಲ್ಲವನ್ನೂ ತಿಂದರೆ ಚೆನ್ನು ಎಂದು. ಅದಕ್ಕೇ ಹೀಗೆ ಮಾಡಿದೆ.

—ಅಮಾವಾಸ್ಯೆ ಪ್ರಯುಕ್ತ ಕೊರವ ಕೆರಳಿರಬಹುದು. ಆದರೆ ಆ ಆಫೀಸಿನ ವರಿಗೆ ಸದಾ ಅಮಾವಾಸ್ಯೇನೇ?

* * *

ಶ್ರೀಯುತ ಶ್ರೀ ಜಮಾನ್ದಾರ್ ಅಂತ ವಿಸಿಟಿಂಗ್ ಕಾರ್ಡ್ ಇಟ್ಟುಕೊಂಡಿದ್ದವರೆಲ್ಲರೂ, ಮೊನ್ನೆ ಶ್ರೀ ಕಡಿದಾಳ್‌ರವರು ಕಾನೂನು ಮಾಡಿಸಿದಮೇಲೆ—

ಶ್ರೀ ... ಜಾವಿಾನ್‌ದಾರ್ ಅಂತ ಮಾರ್ಪಡಿಸಿಕೊಂಡಿರುವುದು ದಿಟವಲ್ಲವಂತೆ.

* * *

"ಕಾಶ್ಮೀರ್ ಪ್ರಿನ್ಸ್‌ಸ್"ನ ಜಾತಕ ಈಗ ನಿಖರವಾಗಿ ಒರೆಯಲ್ಪಟ್ಟಿದೆಯಂತೆ

* * *

ಇಂಗ್ಲೆಂಡಿನಲ್ಲಿ ಈರ್ಡ್ ಪಾರ್ಟಿ ಗೆದ್ದಿತು ಎಂದು ಅಮೇರಿಕಾದಲ್ಲಿ ಹಬ್ಬವನ್ನು ಆಚರಿಸಿದರೆಂಬುದು ಸುಳ್ಳಂತೆ.

* * *

ಪ್ರತಿಭಟನೆ

ಭಟನೆಯಿದ್ದರೆ, ಪ್ರತಿಭಟನೆ ಇದ್ದೇ ಇರುತ್ತದೆ. ಏಕೆ? ಭಟರಿಲ್ಲದಿದ್ದರೂ, ಪ್ರತಿಭಟನೆ ಸಹಜ. ಪ್ರತಿಭಟನೆ, ಮಾನವನ ಆಜನ್ಮ ಹಕ್ಕಲ್ಲ! ಅದು, ಅವನ ಆಜನ್ಮ ಅಭ್ಯಾಸ, ಹುಟ್ಟಿದಾಗಿನಿಂದ ಸಾಯುವತನಕ, ತೊಟ್ಟಿಲಿಂದ ಚಟ್ಟದವರೆಗೂ, ಅವನ ಬೆನ್ನುಹತ್ತಿರುವ ವ್ಯಾಧಿ. ಜೀವನವನ್ನು ರಸಮಯವಾಗಿ ಮಾರ್ಪಡಿಸುವ ಒಂದು ಉತ್ತಮ ಚರ್ಯೆ; ಕ್ರೀಡೆ; ಆಟ; ಚಾಳಿ. ಪ್ರತಿಭಟಿಸಲು ಯಾವುದೂ ಸಿಕ್ಕದಿದ್ದರೆ, ಮನುಷ್ಯನಿಗೆ ಬದುಕೇ ಬೇಸರವಾಗುತ್ತದೆ.

ಜನಿಸಿದ ಕೂಡಲೇ, ಮಗು ಸೂಲಗಿತ್ತಿಯಮೇಲೆ ರೇಗಿ ಆರ್ಭಟಿಸುತ್ತದೆ. ಹೊಸ ಜನ್ಮವನ್ನು ಆ ಮನೆಯಲ್ಲಿ, ಆ ನಂಟರ ಗುಂಪಿನಲ್ಲಿ, ಆ ಕುಲಗೋತ್ರದಲ್ಲಿ ಇತ್ತುದಕ್ಕಾಗಿ ಬ್ರಹ್ಮಾದಿ ಸಮಸ್ತ ದೇವತೆಗಳನ್ನೂ ಬೈಯುತ್ತದೆ. ಆಮೇಲೆ, ಆ ಮಗು ಕಹಿಎಣ್ಣೆಯನ್ನು ಪ್ರತಿಭಟಿಸುತ್ತದೆ; ಹುಳಿ ಖಾರವನ್ನು ಪ್ರತಿಭಟಿಸುತ್ತದೆ; ಶುದ್ಧವಸ್ತ್ರಧಾರಣಾ ಪದ್ಧತಿಯನ್ನು ಪ್ರತಿಭಟಿಸುತ್ತದೆ. ಸ್ಕೂಲು ಎಂಬ ಕಾರಾಗೃಹವನ್ನು ಖಂಡಿಸುತ್ತದೆ. ಆರೋಗ್ಯ ನಿಯಮಗಳ ಮೇಲೆಲ್ಲ ಚಳುವಳಿ ಹೂಡುತ್ತದೆ.

ಆಚಾರ ವ್ಯವಹಾರಗಳಿಗೆಲ್ಲ ಅರೆಮನಸ್ಸಿನಿಂದ ತಲೆಬಾಗಿದರೂ, ಯಾರಾದರೂ ಹತ್ತಿರ ನಿಂತು, 'ಧತ್! ಇದು ನಿರರ್ಥಕ,' ಎಂದು ಕೂಗಿದರೆ, ತಕ್ಷಣವೇ ನಮ್ಮ ಮನಸ್ಸು ಅದಕ್ಕೆ ಓಗೊಡುತ್ತದೆ; ಹೂಂಗುಟ್ಟುತ್ತದೆ; ನಮ್ಮ ದನಿಯೂ ಅವರ ಪ್ರತಿಭಟನೆಯೊಂದಿಗೆ ಸೇರಿ ಅದನ್ನು ಪುಷ್ಟೀಕರಿಸುತ್ತದೆ.

ಶಾಲಾಕಾಲೇಜುಗಳಲ್ಲೋದುವಾಗಲೇ, ನಾವು ಶಿಕ್ಷಣ ಪದ್ಧತಿಯನ್ನು ಟೀಕಿಸುತ್ತೇವೆ. ಅವು ಬರಿಯ ಗುಮಾಸ್ತರನ್ನು ತಯಾರಿಸುವ ಕಾರ್ಖಾನೆಗಳು, ಉರ್ವೀತಲವನ್ನು ನಿರ್ವೀರ್ಯಮಾಡುವ ಸಂಸ್ಥೆಗಳು, ಎಂದು ಕೂಗುತ್ತೇವೆ. ಪರೀಕ್ಷೆಗಳಲ್ಲಿ ಗೆದ್ದವರು ತಮಗೆ ಉದ್ಯೋಗ ದೊರಕಿಸಿಕೊಡಲು ಸರ್ಕಾರ ಅಸಮರ್ಥರು ಎಂದು ಪ್ರತಿಭಟಿಸುತ್ತಾರೆ; ಫೆಯಿಲಾದವರು ತಮಗೆ ಡಿಗ್ರಿ ದೊರಕಿಸಿಕೊಡಲು ಉಪಾಧ್ಯಾಯರು ಅಸಮರ್ಥರು ಎಂದು ಕೂಗಿ ಗುಲ್ಲೆಬ್ಬಿಸುತ್ತಾರೆ.


ಮೂವತ್ತುವರ್ಷ ವಯಸ್ಸು ತುಂಬಿ, ಕೆಳಹೊಟ್ಟೆ ಮುಂದು ಬಂದು, ನಾವು ಮಧ್ಯಮ ತರಗತಿಯವರಾದ ಕೂಡಲೇ, ನಮ್ಮ ಪ್ರತಿಭಟನೆ ಸಂಸ್ಥೆಗಳ ಮೂಲಕ

ರೂಪುಗೊಳ್ಳಲು ಪ್ರಾರಂಭವಾಗುತ್ತದೆ. ನೌಕರರ ಸಂಘ, ನೌಕರಿದಾತರ ಸಂಘ, ಬರಹಗಾರರ ಸಂಘ, ಬಾತ್ಮೀದಾರರ ಸಂಘ, ಗಾಯಕರ ಸಂಘ–ಎಂದು ನಾವು ತಂಡಗಳನ್ನು ನಿರ್ಮಿಸಿಕೊಂಡು, ಕೋಣೆ ಸೇರಿ, ಠರಾವುಗಳನ್ನು ಹಿಡಿದು ಜಗಳವಾಡುತ್ತೇವೆ.

ಐವತ್ತಾಗುತ್ತಲೂ, ಪ್ರತಿಭಟನೆಗೆ ವಿರುದ್ಧ ಪ್ರತಿಭಟನೆ ನಡೆಯಿಸುತ್ತೇವೆ.

ವ್ಯಕ್ತಿ ವ್ಯಕ್ತಿಯಾಗಿಯೇ ಉಳಿಯಲು 'ಪ್ರತಿಭಟನೆ ಅತ್ಯಗತ್ಯ. ಗುಂಪಿನಲ್ಲಿ ಗೋವಿಂದ ಎನ್ನಬಹುದು. ಆದರೆ, ಯಾವಾಗ? ಉಳಿದವರೆಲ್ಲರೂ, ನಾರಾಯಣ, ಎನ್ನುವಾಗ, ನಾವು ಗೋವಿಂದಾ ಎನಬೇಕು. ಅದು ವ್ಯಕ್ತಿ ಸ್ವಾತಂತ್ರ್ಯ. ಆತ್ಮಾಭಿಮಾನದ ಕುರುಹು, ಆತ್ಮಗೌರವದ ಹೆಬ್ಬೇರು.

— ಕಾಮತ್.



ರೈಲ್ವೆ ಸ್ಪೋರ್ಟ್ಸ್

ಅಖಿಲಭಾರತದಲ್ಲಿ ಅನೇಕ ಕ್ರೀಡಾ ಸ್ಪರ್ಧೆಗಳು ಈಚೆಗೆ ನಡೆಯುತ್ತಿವೆ. ಕ್ರಿಕೆಟ್ ಹಾಕಿ ವಾಲಿಬಾಲ್ ಬಾಸ್ಕರ್‌ಬಾಲ್ ಫುಟ್‌ಬಾಲ್ ಟೆನ್ನಿಸ್ ಇತ್ಯಾದಿ ಆಟಗಳೇ ಇವುಗಳಿಗಾಗಿ ಉಪಯೋಗಿಸಲ್ಪಡುತ್ತಿವೆ. ಭಾರತದ ರೈಲ್ವೆಗಳೂ ಕೂಡ, ಇವೇ ಆಟಗಳನ್ನು ಪ್ರೋತ್ಸಾಹಿಸಿ, ದಕ್ಷಿಣ ಪೂರ್ವ ಉತ್ತರ ಪಶ್ಚಿಮ ಆಗ್ನೇಯ ವಾಯುವ್ಯ ಪ್ರದೇಶಗಳ ಸಿಬ್ಬಂದಿಗಳನ್ನು ಹುರಿದುಂಬಿಸಿ, ಇಂತಹ ಸ್ಪರ್ಧೆಗಳನ್ನು ನಡೆಯಿಸುತ್ತಿವೆ.

ಇದು ಬರಿಯ "ಗತಾನುಗತಿಕೋ ಲೋಕಃ"; ನವಿಲನ್ನು ನೋಡಿ ಕೆಂಬೂತ ಪುಕ್ಕ ತೆರೆದುಕೊಂಡಹಾಗೆ.

ರೈಲ್ವೆಗಳಿಗೆ ಅನ್ವಯಿಸುವ, ಅವುಗಳಿಗೇ ಸಾಧ್ಯವಾಗುವ, ಅವೇ ಏರ್ಪಡಿಸಲು ತಕ್ಕುದಾದ ಕ್ರೀಡೆಗಳು ಸಾವಿರಾರು ಇರುವಾಗ, ಅವರೂ ಏಕೆ ಈ ಓಬೀರಾಯನ ಕಾಲದ ಆಟಗಳಿಗಾಗಿ ಹಣವನ್ನು ಕಾಲವನ್ನು ವ್ಯಯಮಾಡಬೇಕು? ರೈಲು ಪ್ರಯಾಣವನ್ನು ಸುರಸವೂ ಜನಪ್ರಿಯವೂ ಚಿತ್ತಾಕರ್ಷಕವೂ ಮಾಡಲು ಈ ಸ್ಪರ್ಧೆಗಳು ಸಹಾಯಕವಾಗಬೇಕಲ್ಲವೆ?

ಜನ ಕಿಕ್ಕಿರಿದು ತುಂಬಿರುವ ಪ್ಲಾಟ್‌ಫಾರಂಗೆ ಖಾಲಿ ರೈಲನ್ನು ಹಿಂದುಮುಂದಾಗಿ ನೂಕಿ ತರುವಾಗ, ಅರ್ಧನಿಮಿಷ ಕಾಲಾವಕಾಶದಲ್ಲಿ ಅವರೆಲ್ಲ ಟ್ರಂಕು ಬೆಡ್ಡು ಮಕ್ಕಳು ಮರಿ ಮುದುಕಿ ಮುದುಕ ಛತ್ರಿ ದೊಣ್ಣೆ ಟೆನ್ನು ಮೂಟೆಸಹಿತ ಕಿಟಕಿಯೊಳಗಿಂದ ಒಳಕ್ಕೆ ಧುಮುಕುವ ರಮಣೀಯ ದೃಶ್ಯವನ್ನು ರೈಲ್ವೆ ಅಧಿಕಾರಿಗಳು ನೋಡಿಲ್ಲವೇನು? ಮತ್ತೆ, ಅವರೇಕೆ ಅದಕ್ಕೊಂದು ಸ್ಪರ್ಧೆ ಏರ್ಪಡಿಸಿ, ಕೈಕಾಲು ಜಖಂ ಆಗದೆ ಆಸನಸ್ಥರಾದ ಪೈಲ್ವಾನರಿಗೆ ಒಂದು ಬೆಳ್ಳಿಕಪ್ಪನ್ನು ಬಹುಮಾನವಾಗಿ ಕೊಡಬಾರದು. ಇದು ನಿಜವಾಗಿಯೂ ರೈಲ್ವೆ ಸ್ಪೋರ್ಟ್ಸ್! ಹಾಗೆಯೇ, ಕುರಿಮಂದೆಯನ್ನು ಕೂಡಿಟ್ಟ ಹಾಗಿನ ಕಂಪಾರ್ಟ್‌ಮೆಂಟಿನಲ್ಲಿ, ಕಾಲು ಚಾಚಿ ಉದ್ದಕ್ಕೂ ಮಲಗಿ, ಯಾರ ಗೋಳಿಗೂ ಯಾವ ಹೆದರಿಕೆಗೂ ಎಂಥ ಸದ್ದಿಗೂ ಏಳದೆ, ನಿದ್ದೆಮಾಡುವ ಮಹನೀಯನಿಗೆ ಮೆಡಲು ಕೊಡಬಾರದೇನು?

ಕುರುಡರೂ ಕುಂಟರೂ ಗಾಡಿಗಳ ಹಿಂಭಾಗದಿಂದ ಹತ್ತಿ, ಡಬ್ಬಿಯಿಂದ ಡಬ್ಬಿಗೆ, ರೈಲು ಓಡುತ್ತಿರುವಾಗಲೇ, ಹಿಡಿಗಳ ಸಹಾಯದಿಂದ ಓಡಾಡುತ್ತಿದಾರಲ್ಲಾ....ಅವರ ಚಾಕ ಚಕ್ಯತೆಯ ಪ್ರದರ್ಶನಕ್ಕೆ ಒಂದು ಅಖಿಲಭಾರತ ಸ್ಪರ್ಧೆಯನ್ನು ಪ್ರಾರಂಭಿಸಬಹುದು. ರೈಲ್ವೆಯವರು ಈಗ ಉಚಿತಪ್ರಯಾಣದ ಸೌಲಭ್ಯ ಕೊಟ್ಟು ಪ್ರೋತ್ಸಾಹಿಸುತ್ತಿರುವ ಗಾಯಕರನ್ನು ಲಾವಣಿಕಾರರನ್ನೂ ಸಿನಿಮ ಸಂಗೀತಕಾರರನ್ನೂ ಒಂದೆಡೆ ಸಮ್ಮೇಳನ ಸೇರಿಸಿ, ಸ್ಪರ್ಧೆ ನಡೆಯಿಸಬಹುದು. ಬೆಂಚಿನ ಕೆಳಗೆ ತೆಪ್ಪಗೆ ಮಲಗುವ ನಾಲ್ಕನೆಯ ತರಗತಿಯವರನ್ನು ಬಹುಮಾನಗಳಿಂದ ಗೌರವಿಸಬಹುದು.

ಓಡುತ್ತಿರುವ ರೈಲಿಂದ ಇಳಿಯುವುದು, ರೈಲಿನ ಜೊತೆಯಲ್ಲೇ ಕೊಂಚದೂರ ಓಡಿ ಸರಕ್ಕನೆ ಹತ್ತುವುದು, ಈ ಎರಡು ಆಟಗಳಲ್ಲೂ ಪ್ರವೀಣರಾದ ಗಾರ್ಡುಗಳಿಗೆ ಪ್ರತ್ಯೇಕ ಸ್ಪರ್ಧೆಯನ್ನೇರ್ಪಡಿಸಬಹುದು. ಸಾರ್ವಜನಿಕರಿಗೂ ಅವರೊಂದಿಗೆ ಪೈಪೋಟಿ ನಡೆಸಲು ಅನುಕೂಲ ಮಾಡಿಕೊಡಬಹುದು.

ನಿಂತೇ ನಿದ್ದೆಮಾಡುವ ಸಾಹಸಿಗಳು ಅನೇಕರು ದೇಶದಾದ್ಯಂತ ಸಿಕ್ಕುತ್ತಾರೆ. ೭೪ ಗಂಟೆ ಒಂದೇ ಸಮನೆ ಹೀಗೆ ಪ್ರಯಾಣ ಮಾಡಿದ ಮಹಾವೀರನೊಬ್ಬ ಉತ್ತರ ದೇಶದಲ್ಲಿದಾನೆ....ತಲೆಯಮೇಲೆ, ತೋಳ ತುಂಬ, ಕೈಹಿಡಿಗಳಲ್ಲಿ, ಹತ್ತಾರು ಟ್ರಂಕು, ಗೂಡೆ, ಹಾಸಿಗೆಗಳನ್ನು ಹೊತ್ತು ಸಾಗಿಸಬಲ್ಲ ಪೋರ್ಟರುಗಳಿಗಾಗಿಯೇ ಸ್ಪರ್ಧೆ ಬೇಡವೆ?

ಮಾವಿನ ಹಣ್ಣಿನ ಗೂಡೆಗಳಿಂದ, ಗಂಟು ಬಿಚ್ಚದೆ, ಸುಳು ಕೊಡದೆ, ಎಲ್ಲ ಹಣ್ಣುಗಳನ್ನು ಹೊರತೆಗೆದು, ಅಷ್ಟೇ ಭಾರದ ಕಲ್ಲುಗಳನ್ನು ಭರ್ತಿಮಾಡುವ ಕಲೆಗೆ ಪ್ರೋತ್ಸಾಹವೇ ಬೇಡವೆ?

ರೈಲ್ವೆ ಇಲಾಖೆಯವರು ತಮ್ಮ ಸಿಬ್ಬಂದಿಗಳಲ್ಲಡಗಿರುವ ಕಲೆಗಳಿಗೆ ಪ್ರತ್ಯೇಕ ಉತ್ತೇಜನ ಕೊಡಬೇಕು. ತಮ್ಮ ಆದಾಯಕ್ಕೆ ಆಧಾರಭೂತರಾದ ಸಾರ್ವಜನಿಕರನ್ನು ಸಪ್ರೀತಿಗೊಳಿಸಬೇಕು. ಈ ಉದ್ದೇಶಗಳಿಂದ ಸ್ಪರ್ಧೆಗಳು ರಚಿತವಾಗಬೇಕು.

ಸಾರಥಿ.

ಲಂಕಾದಹನ

ನಮ್ಮ ಹಳ್ಳಿಯಲ್ಲಿ ಪ್ರತಿವರ್ಷವೂ ಮಾರಿಹಬ್ಬವಾದಮೇಲೆ ಎರಡು ಪಾರ್ಟಿಯ (!) ಪಾರ್ಟಿದಾರರೂ ಸೇರಿ ಊರುಮುಂದೆ ಚಪ್ಪರಹಾಕಿ ಯಾವುದಾದರೂ ನಾಟಕವನ್ನು ಕುಣಿದು ಆ ವರ್ಷ ಎರಡು ಪಾರ್ಟಿಯುವರಿಗೂ ನಡೆದ ಮಾರಾಮಾರಿ, ಮನಸ್ತಾಪ, ವೈಷಮ್ಯ, ಅನಾಚಾರ, ವ್ಯಭಿಚಾರಗಳನ್ನು ಮರೆಯುವುದು ರೂಢಿ. ಅದರಂತೆ ಈ ವರ್ಷವೂ ಹಬ್ಬವಾದಮೇಲೆ ನಾಟಕದ ಏರ್ಪಾಟು ಪ್ರಾರಂಭವಾಯಿತು. ಯಾವ ನಾಟಕ ಆಡಬೇಕೆಂಬುದರಬಗ್ಗೆ ಎರಡು ಪಾರ್ಟಿಯುವರಿಗೂ ಭಿನ್ನಾಭಿಪ್ರಾಯ ಬಂದು ಪರಸ್ಪರ ಕಚ್ಚಾಟ ಪ್ರಾರಂಭವಾಯಿತು. ಚೇರ್‌ಮನ್‌ರ ಪಾರ್ಟಿ 'ಲಂಕಾದಹನ' ಆಡಬೇಕು ಅಂತ ಹಠ ಹಿಡಿದರು. ಎದುರು ಪಾರ್ಟಿಯುವರು ಚೇರ್‌ಮನ್‌ರ ಮುಖಕ್ಕೆ ಮಸಿ ಬಳಿಯೋಣ ಅಂತ 'ಹರಿಶ್ಚಂದ್ರ' ಆಡೋಣವೆಂದು ಸಂಚು ಹೂಡಿದರು. ಹಳೆಯ ಚೇರ್‌ಮನ್‌ರೇ ಈ ಸಲವೂ ಚುನಾಯಿಸಿ ಬಂದಿದ್ದರಿಂದ ಜನರು ಸುಳ್ಳು, ಮೋಸದ ದಾರಿ ಹಿಡಿಯುವ ಸಂಭವ ಹೆಚ್ಚು. ಆದ್ದರಿಂದ "ಹರಿಶ್ಚಂದ್ರ" ಆಡಿ, ಜನರಿಗೆ ಸತ್ಯದ ಮಹಿಮೆ ತೋರಿಸೋಣ ಎಂದು ಪಟೇಲರು ಸ್ವಲ್ಪ ಕುಮ್ಮಕ್ಕು ಕೊಟ್ಟರು. ಎಲ್ಲಕ್ಕಿಂತಲೂ ಹೆಚ್ಚಾಗಿ ನಮ್ಮೂರಿನವರಿಗೆ ಹರಿಶ್ಚಂದ್ರ ಕಂಠಪಾಟವಾದ ಹಾಗೆ ಲಂಕಾದಹನ ಆಗಿರಲಿಲ್ಲ. ಕಡೆಗೆ ಎರಡೂ ಪಾರ್ಟಿಗಳ ಇಬ್ಬರು ಪ್ಲೀಡರುಗಳು ಸಂಧಾನ ನಡೆಸಿದಮೇಲೆ 'ಹರಿಶ್ಚಂದ್ರ'ನೇ ಆಡಬೇಕೆಂದು ತೀರ್ಮಾನವಾಯಿತು. ಆದರೂ ಎರಡು ಪಾರ್ಟಿಯುವರಿಗೂ ಒಳಗೆ ಕುದಿಯುತ್ತಲೇ ಇತ್ತು.

"ಹರಿಶ್ಚಂದ್ರ", "ರೋಹಿತಾಶ್ವ" ಇಬ್ಬರೂ ಚೇರ್‌ಮನ್‌ರ ಪಾರ್ಟಿಯುವರು. "ಚಂದ್ರಮತಿ" ಮಾತ್ರ ಎದುರು ಪಾರ್ಟಿಗೆ ಸೇರಿದವಳು. ಹೀಗಾಗಿ 'ಚಂದ್ರಮತಿ' ಎಲ್ಲಿ ಕೈಕೊಡುತ್ತಾಳೋ ಎನ್ನುವ ಭೀತಿ ಹರಿಶ್ಚಂದ್ರನಿಗಿದ್ದೇ ಇತ್ತು. ಹರಿಶ್ಚಂದ್ರ ನಾಟಕದಲ್ಲೂ ಎಲ್ಲಿ ಸುಳ್ಳು ಹೇಳುತ್ತಾನೋ ಎನ್ನುವ ಭಯ ಇವರಿಗೂ ಇತ್ತು. ಇದರಮೇಲೆ ಹರಿಶ್ಚಂದ್ರನ ಪಾರ್ಟು ಹಾಕಿದ್ದ ಹನುಮಪ್ಪನೇ 'ಲಂಕಾದಹನ' ಆಡಬೇಕು ಅಂತ ಹಠ ಹಿಡಿದಿದ್ದಿದ್ದು.

ನಾಟಕದ ದಿವಸ ರಂಪವೋ ರಂಪ. 'ವಿಶ್ವಾಮಿತ್ರ' ಚೇರ್‌ಮನ್‌ರ ಪಾರ್ಟಿಯುವನು. ಅವನು ನಾಟಕದ ಪ್ರಾರಂಭದಲ್ಲಿಯೇ "ವಸಿಷ್ಠ"ನನ್ನು ಒದ್ದು ಕೆಡವಿ ಕಪಾಳಕ್ಕೆ ಎರಡು ಬಿಗಿದ. ಚೇರ್‌ಮನ್‌ರು ಬಂದು ಇಬ್ಬರಿಗೂ ರಾಜಿಮಾಡಿಸಿದ ಮೇಲೆ ನಾಟಕ ಹೇಗೋ ಮುಂದುವರಿಯಿತು. ಆದರೂ ಹರಿಶ್ಚಂದ್ರ ಒಂದೆರಡುಕಡೆ ಸುಳ್ಳು ಹೇಳೇಬಿಟ್ಟ! ರೋಹಿತಾಶ್ವ ಹಾವು ಕಡಿದು ಸತ್ತಾಗ ಚಂದ್ರಮತಿ ಅಳಲೇ ಇಲ್ಲ. ಪ್ರೇಕ್ಷಕರು "ಅಳೆ, ಮಗು ಸತ್ತುಹೋಗಿದಾನೆ" ಅಂತ ಎಷ್ಟು ಬಡಿದುಕೊಂಡರೂ ಅವಳ ಕಣ್ಣಲ್ಲಿ ಒಂದು ತೊಟ್ಟು ನೀರೂ ಬರಲಿಲ್ಲ. ಪರದೆಯ ಹಿಂದೇ ನಿಂತಿದ್ದ ಹನುಮಪ್ಪ (ಹರಿಶ್ಚಂದ್ರ)ನಿಗೆ ಕೋಪ ನೆತ್ತಿಗೇರಿ ಸೈಡ್‌ವಿಂಗ್ ಸಮೀಪಿಸಿ "ಚಂದ್ರ

ಮತಿ"ಯನ್ನು ಎಳೆದುಕೊಂಡು ಎರಡು ಬಾರಿಸಿದ. 'ಅವಳು' ಅತ್ತುಕೊಂಡು ಸ್ಟೇಜಿಗೆ ಬಂದಳು. ಅಷ್ಟುಹೊತ್ತಿಗೆ ಮುಂದಿನ ಸಾಲಿನಲ್ಲಿ ಕೂತಿದ್ದ ದನಕಾಯೋ ಹುಡುಗರು "ಲೋ ರಂಗ! ಎಷ್ಟೊತ್ತು ಹಿಂಗೆ ಬಿದ್ದಿರ್ತೀಯಲ, ಎದ್ದು ಒಂದು ಬೀಡಿ ಸೇದಲಾ" ಅಂತ ಸತ್ತುಬಿದ್ದಿದ್ದ ರೋಹಿತಾಶ್ವನ ಮುಂದೆ ಒಂದು ಬೀಡಿ ಬಿಸಾಕಿ ಅವನನ್ನು ಎಬ್ಬಿಸಿಬಿಟ್ಟಿದ್ದರು. ಪರದೆಹಿಂದೆ ಗಲಾಟೆಯೋ ಗಲಾಟೆ. ಅವರ ಕಡೆಯುವರಿಂದ ನಾಟಕ ಹಾಳಾಯ್ತು ಅಂತ ಇವರು, ಇವರಿಂದ ಹಾಳಾಯ್ತು ಅಂತ ಅವರು. ನಾಟಕ ನೋಡುಕ್ಕೆ ಬಂದಿದ್ದವರಿಗೂ ತಲೆ ಕೆಟ್ಟು ಆಜುಬಾಜು ಬಿದ್ದಿದ್ದ ಕಲ್ಲುಗಳನ್ನೆಲ್ಲ ಆರಿಸಿ ರಾಶಿಹಾಕಿದರು.

ನಾಟಕದ ಕಡೇ ಸೀನೂ ಬಂತು. ಹರಿಶ್ಚಂದ್ರ ಚಂದ್ರಮತಿ ಕತ್ತನ್ನು ಕತ್ತರಿಸುವ ಸೀನು. 'ಹರಿಶ್ಚಂದ್ರ' ಕತ್ತಿಯನ್ನು ಎರಡು ಕೈಯಿಂದಲೂ ಮೇಲಕ್ಕೆ ಎತ್ತಿ ಸಿದ್ಧವಾದ ತಕ್ಷಣ 'ಚಂದ್ರಮತಿ', "ನಾಥ, ಮುತ್ತೈದೆಯರಿಗೆ ಅರಿಶಿನ ಕುಂಕುಮ ಕೊಟ್ಟು ಬರುತ್ತೇನೆ, ಇನ್ನೆರಡು ನಿಮಿಸ ತೆಪ್ಪಗಿರಲಾರಯ" ಎಂದಳು. 'ಹರಿಶ್ಚಂದ್ರ'ನು ಬೇಗ ಬರಬೇಕೆಂದು ಹೇಳಿಕಳಿಸಿಕೊಟ್ಟನು. ಅವನುಮಾತ್ರ ಎತ್ತಿದ ಕತ್ತಿಯನ್ನು ಇಳಿಸಲೇ ಇಲ್ಲ ರೋಹಿತಾಶ್ವ ಸತ್ತಾಗ ಅಳಲಿಲ್ಲ ಎಂಬ ಕಾರಣದಿಂದ ಒದೆ ತಿಂದಿದ್ದ 'ಚಂದ್ರಮತಿ' 'ಹರಿಶ್ಚಂದ್ರನಿಗೆ' ಕೈಕೊಟ್ಟು ನೆಟ್ಟಗೆ ಮನೇಗೆ ನಡೀತಿದ್ದಳು! 'ಹರಿಶ್ಚಂದ್ರನಿಗೆ' ಕೈನೋವು ಬಂತು. ಹತ್ತುನಿಮಿಷವಾದರೂ ಚಂದ್ರಮತಿ ಸುಳುವೇ ಇಲ್ಲ! ಇನ್ನೇನು ಕಲ್ಲಿನೇಟು ಬೀಳುವ ಸಮಯ. ಹರಿಶ್ಚಂದ್ರನ ಪಾರ್ಟು ಹಾಕಿದ್ದ ಹನುಮಪ್ಪನಿಗೆ ಏನು ತೋಚಿತೋ, ಅವನು ಕತ್ತಿಯನ್ನು ಬಿಸಾಡಿ ಹೊದ್ದಿದ್ದ ಪಂಚೆಯನ್ನು ಹಗ್ಗದಂತೆ ಹೊಸದು ಕಚ್ಚೆಗೆ ಬಾಲದಂತೆ ಸಿಕ್ಕಿಸಿಕೊಂಡು, ಅರ್ಧಬಾಲವನ್ನು ಎಡಗೈ ಮೇಲೆ ಹಾಯಿಸಿ, ನಡುವಿಗೆ ಇನ್ನೊಂದು ಹಳೆಬಟ್ಟೆ ಬಿಗಿದು ನೆಲವನ್ನು ಚಿಮ್ಮುತ್ತ ಗುಜ್ಜು ಹೆಜ್ಜೆಹಾಕಿ "ಎಲ ದುಷ್ಟರಾವಣ, ಸೀರಾಮನ ಧರ್ಮಪತ್ನಿಯಾದ ಸೀತಾ ಮಾತೆಯನ್ನು ಕದ್ದುತಂದು ಬಚ್ಚಿಟ್ಟುಕೊಂಡಿರುವೆಯ ಪಾಪಿ! ಎಲಾ ರಾಕ್ಷಸಾಧಮ —ನಿನ್ನ ವಂಸ ತೊಳದುಹೋಗಲಿ. ಸೀರಾಮನು ಬಂಧು ನಿನ್ನ ತಲೆಗಳನ್ನು ಕತ್ತರಿಸಿ ಹಾಕುವುದಕ್ಕೆ ಮುಂಚೆ, ವಿಪಲ ಐಶ್ವರ್ಯವಿರುವ ನಿನ್ನೀ ರಾಜಧಾನಿಯನ್ನು ಇನ್ನು ಎರಡು ನಿಮಿಸದಲ್ಲೇ ಭಸ್ಮಮಾಡಿ ವಿಭೂತಿಯನ್ನು ಹಣೆಗೆ ಧರಿಸಿ ನನ್ನ ಸ್ವಾಮಿಯ ಬಳಿಗೆ ಸಾರುತ್ತೇನೆ" ಎಂದು ಹೇಳಿ ಸೊಂಟದಿಂದ ಕಡ್ಡಿಪೆಟ್ಟಿಗೆ ತೆಗೆದು, ಗೀಚಿ ಹತ್ತಿಸಿಕೊಂಡು ಮೂರುಸುತ್ತು ತಿರಿಗಿ ಚಪ್ಪರದ ಪಕ್ಕಕ್ಕೆ ಹಾರಿ ಪರದೆಗೆ ಬೆಂಕಿ ಇಟ್ಟನು. ಶ್ಮಷಾನದ ಸೀನಿದ್ದ ಪರದೆ ಹತ್ತಿಕೊಂಡು ಚಪ್ಪರವು ಧಗಧಗನೆ ಉರಿಯಲು ಪತ್ತಿತು.

ಬಯಲಿನಲ್ಲಿ ಚಪ್ಪರ ಹಾಕಿದ್ದುದರಿಂದ, ಆಜುಬಾಜು ಮನೆಮಠ ಇಲ್ಲದ್ದರಿಂದ ಯಾರೊಬ್ಬರೂ ಬೆಂಕಿ ಆರಿಸುವ ಪ್ರಯತ್ನಕ್ಕೆ ಹೋಗದೆ ದೂರ ನಿಂತುಕೊಂಡು "ಲಂಕಾದಹನ" ನೋಡಿ ಎಲ್ಲರು ಮನೆಗೆ ಹೋದರು.

— ಹಾ. ರಾ.

ತ್ರಿಶಂಕು ನರಕ

ಹರಕೆ ಹೊತ್ತರೆ ಹನ್ನೆರಡು ವರ್ಷವಂತೆ — ಹಾಗಾಗಿದೆ ನಮ್ಮ ಯಾತ್ರೆ! ನನಗನ್ನಿಸುತ್ತೆ — ತಲಕಾಡು ಹನುಮಂತನ ಬಾಲದ ತುದೀಲಿ ಸಿಕ್ಕಿಹಾಕಿಕೊಂಡಿದೆಯೋ ಅಂತ! ನಾವು ತುಂತರಕಟ್ಟೆ ಬಿಟ್ಟು ಭೃಂಗೇರಿ ಸೇರುವ ಹೊತ್ತಿಗೆ ನಮ್ಮ ಮೈಮೇಲಿದ್ದ ಬಟ್ಟೆಗಳು ಒಣಗಿದವು. ನಾನು ಒಂದೇ ಮನಸ್ಸಿನಿಂದ ನನ್ನ ಸೈಕಲ್ ತುಳಿಯುತ್ತಿದ್ದೆ. ನನಗೂ ತಲಕಾಡಿಗೂ ಇದ್ದ ದೂರದಲ್ಲಿ ಪ್ರತಿಯೊಂದು ಅಡಿಯನ್ನೂ ಕಳೆಯುತ್ತ ತುಳಿದೆ. ಭೃಂಗೇರಿಯಲ್ಲಿ ಇಳಿಯೋಕೆ ನನಗಿಷ್ಟವಿರಲಿಲ್ಲ ಮಧ್ಯಾಹ್ನದ ಹೊತ್ತಿಗೆ ಮುಂದಿನ ಊರು ಸೇರುವ ಆಸೆಯಿತ್ತು. ಅದೇ ಪ್ರಕಾರ ಭೃಂಗೇರಿ ಬಿಟ್ಟು 3427ನೇ ಅಡಿ ತುಳಿಯುತ್ತಿರುವಾಗ ಒಂದು ತರಹ ಘಾಬರಿಯಾಯ್ತು. ಏನೋ ಒಂದು ತರಹ ನಿಶ್ಯಬ್ಧ! ಹಠಾತ್ತನೆ ವಾಹನದಿಂದಿಳಿದೆ. ಹಿಂತಿರುಗಿ ನೋಡಿದೆ—ನಿಶ್ಯಬ್ಧದ ಕಾರಣ—ನನ್ನ ಸ್ನೇಹಿತರಿಬ್ಬರೂ ನನ್ನ ಜೊತೆಯಲ್ಲಿರಲಿಲ್ಲ ವಾಹನವನ್ನು ತಿರುಗಿಸಿ ಪುನಹ 3420 ಅಡಿ ವಾಪಸ್ ತುಳಿದೆ. ಭೃಂಗೇರಿ ಚೌಕದಲ್ಲಿ ರಾಜ ಚಂದಿ ಇಬ್ಬರೂ ಸಿಕ್ಕಿದರು. ಯಾವುದೋ ಜಗಳದಲ್ಲಿ ಸೇರಿದ್ದರು. ಆ ಗುಂಪು ನೋಡಿದೊಡನೆಯೇ ಅವರಿಬ್ಬರನ್ನೂ ಅಲ್ಲೇ ಬಿಟ್ಟು ನಾನೊಬ್ಬನೇ ತಲಕಾಡಿಗೆ ಹೋಗಲೇ—ಅನ್ನಿಸಿತು. ಆದರೂ—ಛೆ-ಪಾಪ!—ಅಂದುಕೊಂಡು ನಾನೂ ಗುಂಪಿನಲ್ಲಿ ಸೇರಿದೆ.

ಅಲ್ಲಿ ನಡೆಯುತ್ತಿದ್ದ ಜಗಳ ಇಷ್ಟು — ಭೃಂಗೇರಿ ವಾಲೀಬಾಲ್ ಟೀಮಿಗೂ ಜೋಗುಂಬೆ–ನಾವು ಹಿಂದೆ ಜೋಗುಂಬೇಲಿ ಒಂದು ಬೈಲಾಟದಲ್ಲಿ ಸಿಕ್ಕಿಹಾಕ್ಕೊಂಡಿದ್ದೆವು–ನಿಮಗೂ ಜ್ಞಾಪಕವಿರಬಹುದು–ಅದೇ ಜೋಗುಂಬೆ ವಾಲೀಬಾಲ್ ಟೀಮಿಗೂ ಒಂದು ಕಾಳಗ ಏರ್ಪಡಿಸಿದ್ದರಂತೆ. ಆದರೆ ಭೃಂಗೇರಿ ಆಕಾಶದಲ್ಲಿ ಮೋಡ ಕವಿದು ಗುಡುಗುವ ರೀತಿ ತೋರಿದ್ದರಿಂದ ಆ ಊರಿನ ಆಟಗಾರರು ಹೆದರಿ ಆಟವನ್ನು ಮರು ದಿನ ಆಡಬೇಕೆಂದು ಹೇಳಿದರಂತೆ. ಅದಕ್ಕೆ ಜೋಗುಂಬೆಯವರು — "ಹಾಗಾಗದು–ಮಳೆ ಬಿದ್ದರೂ ಈಜಿಕೊಂಡಾದರೂ ನಾವು ವಾಲೀವಾಲ್ ಆಡಿಯೇ ಹೋಗುತ್ತೇವೆ' ಅಂತ ಹಠಹಿಡಿದರಂತೆ. ಅವರು ತಮ್ಮ ಆಟಗಾರರನ್ನು ಪ್ರೋತ್ಸಾಹಿಸುವುದಕ್ಕೂ ಭೃಂಗೇರಿಯವರನ್ನು ಕಾಡಿಸುವುದಕ್ಕೂ ಸಾಕಷ್ಟು ಸಿಬ್ಬಂದಿ ಸಾಹಿತ್ಯಗಳನ್ನ ಹವಣಿಸಿಕೊಂಡಿದ್ದರು ಈ ಇಬ್ಬರ ನಡುವೆ ರಾಜ ಚಂದಿ ಪಂಚಾಯಿತಿಗೆ ನಿಂತಿದ್ದರು.

ಜಗಳದ ಬಿಸಿ ಏರಿತು. ಸ್ವಾರಸ್ಯವೂ ಹೆಚ್ಚಿತು. ಭೃಂಗೇರಿಯುವರು ಜೋಗುಂಬೆ ಯುವರನ್ನು "ಮೀನುಜಾತಿ"ಯುವರೆಂದು ಬೈದರು. ಪ್ರತಿಯಾಗಿ ಜೋಗುಂಬೆಯುವರು ಭೃಂಗೇರಿಯುವರನ್ನು "ಒಂಟೆ"ಗಳೆಂದು ಕರೆದರು. ಪ್ರತ್ಯುತ್ತರವಾಗಿ ಭೃ. ರು ಜೋ. ನ್ನು "ತಿಮಿಂಗಿಲ"ಗಳೆಂದರು. ಜೋ.ರು ರೇಗಿ ಭೃ.ನ್ನು "ಹುಚ್ಚುನಾಯಿ" ಗಳೆಂದರು. ಆಮೇಲೆ—

ಭೃ. ರು ಜೋ ನ್ನು— "ಕಪ್ಪೆಗಳು!"
ಜೋ. ರು ಭೃ. ನ್ನು— "ಹೆಂಟೆಗೊದ್ದಗಳು!"
ಭೃ. ರು ಜೋ. ನ್ನು— "ಮೊಸಳೆಗಳು!"
ಜೋ. ರು ಭೃ. ನ್ನು— "ಘೇಂಡಾಮೃಗಗಳು!"
ಭೃ. ರು ಜೋ. ನ್ನು— "... ...."
ಜೋ. ರು ಭೃ. ನ್ನು—"! ?! ?! ?! ?! ?!"

ಒಟ್ಟಿನಲ್ಲಿ ಹೋಲಿಕೆಗಳ ಕಲ್ಪನೆಗಳು ಚೆನ್ನಾಗಿದ್ದವು. ಸಂಸ್ಕೃತಿ ಪ್ರಸಾರದಿಂದ ಪ್ರಯೋಜನವಿಲ್ಲಾ ಅಂತ ದೂರುವವರಿಗೆ ಇದೇ ಪ್ರತ್ಯುತ್ತರ! ಏಕೆಂದರೆ ಈ ವಾಲೀ ಬಾಲ್ ಗಲಾಟೆಯಲ್ಲಿ ಕೂಡ ದಶಾವತಾರಗಳು ಎದ್ದು ಬಂದು ಕುಣಿದಾಡಿದವು. ಆ ಘಳಿಗೆಯಲ್ಲಿ ನಾನು ತಲಕಾಡನ್ನು ಮರೆತೆ. ಬೇಕಾದರೆ ತಲಕಾಡಿಗೆ ರಾಜ ಚಂದಿ ಇಬ್ಬರನ್ನೇ ಸಾಗಿಸುವುದಕ್ಕೆ ಸಿದ್ಧವಾಗಿದ್ದೆ. ಆದರೆ ರಾಜ ಭೃಂಗೇರಿಯ ಪರವಾಗಿಯೂ ಚಂದಿ ಜೋಗುಂಬೆಯ ಪರವಾಗಿಯೂ ವಾದಿಸುತ್ತ ತಮ್ಮಿಬ್ಬರಲ್ಲೇ ಒಂದು ಚಿಕ್ಕ ಯುದ್ಧ ಹೂಡಿಕೊಂಡಿದ್ದರು. ಅವರಿಬ್ಬರ ಚರ್ಯೆ ನೋಡಿದರೆ ಇನ್ನೇನು– ಒಬ್ಬರ ನೊಬ್ಬರು ಹಿಂದೀಲಿ ಬಯ್ಯಾಕ್ಕೆ ಶುರುಮಾಡಬೇಕು! ಅಷ್ಟರಲ್ಲಿ ಇಬ್ಬರನ್ನೂ ಬೇರೆ ಮಾಡಿದೆ.

ಮೋಡಗಳು ಸರಿದಿದ್ದವು. ಎಲ್ಲರೂ ಸೇರಿ ವಾಲೀಬಾಲ್ ಆಟ ಆಡಿಸಿ ನೋಡಿಯೇಬಿಡೋಣವೆಂದು ನಿರ್ಧರಿಸಿದೆವು. ನನಗೂ ಬಹಳ ಸಂತೋಷವಾಯಿತು. ನನ್ನ ವಯಸ್ಸು ಕಮ್ಮಿಯಾಯ್ತು. ಶಾಲೆಯ ದಿನಗಳು ನೆನಪಾಯ್ತು. ಕಾಲುಗಳು ಕೈಗಳು ತಕಪಕ ಕುಣಿದವು. ನಾನು ರಾಜ ಚಂದಿ ಸೇರಿ ಆಟಗಾರರನ್ನು ಸೇರಿಸಿ ಸೈನ್ಯವನ್ನು ವಿಂಗಡಿಸುವುದರಲ್ಲಿ ತೊಡಗಿದೆವು. ಆದರೆ ಎಷ್ಟು ಹುಡುಕಿದರೂ ಅಲ್ಲಿದ್ದ ಸುಮಾರು 500 ಜನರಲ್ಲಿ ಭೃಂಗೇರಿಯುವನಾಗಲೀ ಜೋಗುಂಬೆಯುವನಾಗಲೀ ಒಬ್ಬ ನಾದರೂ ವಾಲೀಬಾಲ್ ಆಟಗಾರನಿರಲಿಲ್ಲ! ನನಗೆ ಆಶ್ಚರ್ಯವಾಯಿತು ವಿಚಾರಿ ಸಿದ್ದರಲ್ಲಿ ಭೃಂಗೇರಿಯುವರ ಹತ್ತಿರ ವಾಲೀಬಾಲಿರಲಿಲ್ಲವೆಂದೂ ಜೋಗುಂಬೆಯುವರು ವಾಲೀಬಾಲು ತರಲಿಲ್ಲವೆಂದೂ, ಆದರೆ ಆಟ ನಿಂತಿದ್ದರಿಂದ ಒಬ್ಬ ಭೃಂಗೇರಿ ಭಾವ ನಿಗೂ ಜೋಗುಂಬೆ ಮೈದುನನಿಗೂ ಜಗಳ ಶುರುವಾಯ್ತೆಂದೂ ತಿಳಿಯಿತು.

ನಾವು ಮೇವಿನಹಳ್ಳಿ ಸೇರಿದಾಗ ಸಾಯಂಕಾಲದ ಸಮಯ ಊರಮುಂದೆಯೇ ಆಸ್ಪತ್ರೆ. ಆಸ್ಪತ್ರೆ ಕಂಡ ತಕ್ಷಣ ಚಂದೀಗೆ ತನ್ನ ಕಾಲಿಗೆ ಪೆಟ್ಟಾಗಿದ್ದು ಜ್ಞಾಪಕ

ಬಂತು. "ಕಾಲಿಗೆ ಸ್ವಲ್ಪ ಟಿಂಚರ್ ಹಚ್ಚಿಕೊಂಡು ಬರ್ತೀನ್ರೋ" ಅಂತ ಆಸ್ಪತ್ರೆ ಯೊಳಕ್ಕೆ ನುಗ್ಗಿದ. ನಾನೂ ರಾಜ ನಡುಬೀದಿಯಲ್ಲಿ ಕಾಲುಘಂಟೆ ಕಾದೆವು. ಚಂದೀನ ಕರೆಯೋಕೆ ರಾಜ ಆಸ್ಪತ್ರೆಗೆ ಹೋದ. ನಾನೊಬ್ಬನೇ ನಡುಬೀದಿಯಲ್ಲಿ ಕಾಲುಘಂಟೆ ನಿಂತೆ. ರಾಜ ಚಂದಿ ಇಬ್ಬರನ್ನೂ ಕರೆಯೋಕೆ ನಾನೂ ಆಸ್ಪತ್ರೆಗೆ ಹೋದೆ.

ನನ್ನನ್ನು ನೋಡುತ್ತಲೇ ಚಂದಿ – "ಅಯ್ಯೋ-ನಿನ್ನ ಮರತೇಬಿಟ್ಟಿನಯ್ಯ! ನೋಡಿ ಡಾಕ್ಟ್ರೇ — ಇವರೇ ನನ್ನ ಇನ್ನೊಬ್ಬ ಸ್ನೇಹಿತರು" ಅಂತ ನನ್ನ ತೋರಿಸಿ, "ನೋಡೋ — ಇವರು ನಮ್ಮ ಡಾಕ್ಟರ್ ಮಾಧು ಜೊತೆಯವರಂತೆ" ಅಂತ ಡಾಕ್ಟರ ಪರಿಚಯಮಾಡಿದ.

ಆಸ್ಪತ್ರೆಯಲ್ಲಿ ನಮ್ಮೆಲ್ಲರ ಜೊತೆಗೆ ಆಗ ಮತ್ತೊಬ್ಬರೂ ಇದ್ದರು. ಎಲ್ಲರೂ ಹರಟೆ ಹೊಡೆಯುತ್ತ ಕುಳಿತೆವು. ಯಾವ ವಿಷಯವೆತ್ತಿದರೂ ಆ ವ್ಯಕ್ತಿ ತಮ್ಮ ಅಭಿಪ್ರಾಯವನ್ನು ಅಧಿಕಾರಯುತವಾಗಿ ಕಸ್ಸೆ ಒತ್ತಿ ಮುಕ್ತಾಯಮಾಡುತ್ತಿದ್ದರು. ಏನೇನೋ ವಿಷಯಗಳಜೊತೆಗೆ ಅವರಿಗೆ ಈಚೆಗೆ ಶಸ್ತ್ರಚಿಕಿತ್ಸೆಯಾಗಿದ್ದೂ ವಿಚಾರ ಬಂತು. ಅದರ ವಿಷಯವಾಗಿ ಒಂದು ಭಾಷಣವನ್ನೇ ಮಾಡಿದರು—

"ನೋಡಿ ಡಾಕ್ಟ್ರೇ—ನೀವು ನನಗೆ ಶಿಫಾರಸುಮಾಡಿ ಆಪರೇಷನ್‌ಗೆ ದೊಡ್ಡಾ ಸ್ಪತ್ರೇಗೆ ಕಳಿಸಿದ್ರಿ. ಆಪರೇಷನ್ನೂ ಆಯ್ತು. ನಾನೂ ರೊಕ್ಕ ಕೊಡೋ ವಾರ್ಡಿ ನಲ್ಲೇ ದಾಖಲಿದ್ದೆ. ನೋಡಿ-ನನ್ನ ಶುಶ್ರೂಷೆಗೆ ನಾಲ್ಕುಜಾತಿ ನರ್ಸುಗಳನ್ನ ಇಟ್ಟಿದ್ರು –ದೊರಸಾನಿಗಳು, ಕಿರಿಸ್ತಾನರು, ನಮ್ಮ ಗೌರಮ್ಮಗಳು– ಆಮೇಲೆ ತ್ರಿಶಂಕುಜಾತಿ ಗಂಡು ನರ್ಸುಗಳು. ನನ್ನ ಕೇಳಿದ್ರೆ-ರೋಗಿಗಳನ್ನ ನೋಡ್ಕೊಳ್ಳೋಕೆ ದೊರಸಾನಿ ಗಳನ್ನ ಬಿಟ್ರೆ ಯಾರೂ ಲಾಯಖ್ಖಿಲ್ಲ! ಆ ಪುಣ್ಯಾತ್ಗಿತ್ತಿಗಳು ನೋಡಿ-ಎಲ್ಲಾ ರೋಗಿ ಗಳಿಗೂ ಒಂದೇ ತರ ನೋಡ್ತಾರೆ. ಇನ್ನೇನೂ ತಿಳ್ಕೋಬೇಡಿ–ನಾನು ಅವರ ಮುಖ ನೋಡಿ ಬೆರಗಾಗಲಿಲ್ಲ—ಇರೋ ಸಂಗತಿ ಹೇಳ್ತೀನೆ-ನನ್ನ ಸ್ವಂತ ಅನುಭವ! ದೊರ ಸಾನಿಗಳ್ನ ಬಿಟ್ರೆ ಕಿರಿಸ್ತಾನಿಗಳು ಪರವಾಗಿಲ್ಲ, ಬೇಡಿಕೊಂಡರೇನಾದ್ರೂ ಅವರು ಸಹಾಯಕ್ಕೆ ಬರ್ತಾರೆ. ನಮ್ಮ ಗೌರಮ್ಮಂದಿರು ಬಿಡಿ–ನಂಗ್ಬೇಡಾ ಸ್ವಾಮೀ-ಅವರೇನು ನರ್ಸುಗಳೋ–ಅಥವಾ ಹಿಂದೆ ಅಶೋಕವನದಲ್ಲಿ ಸೀತಾದೇವಿಗೆ ಇಟ್ಟಿದ್ದ ಸಿಬ್ಬಂದಿಗಳ ಸಂತತಿಯೋರೋ—ಅವರಿಲ್ಲದಿದ್ದರೆ ಸುಖವಾಗಾದ್ರೂ ಸಾಯಭೋದು. ಇನ್ನು ಆ ವಿಶ್ವಾಮಿತ್ರ ಸೃಷ್ಟಿ–ಗಂಡು ನರಸುಗಳು– ನಮಗೆ ಭೂಮೀಲಿರೋವಾಗ್ಲೇ ತ್ರಿಶಂಕು ನರಕ ಕೊಡಿಸ್ತಾರೆ. ಒಟ್ಟಿನಲ್ಲಿ ಹೇಳೋದಾದ್ರೆ........"

ಡಾಕ್ಟರು ಮಧ್ಯೆ ಬಾಯಿಹಾಕಿ—

"ನೀವು ಹೇಳೋದು ಸರಿ ರಂಗರಾಯರೇ, ನಮ್ಮ ಹೆಂಗಸರು ನರ್ಸಿಂಗ್ ಕಲಿತರೆ ಒಳ್ಳೆಯ ಹೆಂಡತಿಯರೂ ಒಳ್ಳೆಯ ತಾಯಂದಿರೂ ಆಗುವುದು ನಿಜ. ಆದರೆ

ನಮ್ಮ ಸಂಸ್ಕೃತಿ ಕೆಟ್ಟುಹೋಗುತ್ತೋ ಅಂತ ಭಯ! ನಮ್ಮ ಜೀವಮಾನವೇ ಈ ಸಂಸ್ಕೃತಿಮೇಲೆ ನಿಂತಿದೆ–ನೀವೇ ಹೇಳಿ–ದ್ರೌಪತಿ, ಶಕುಂತಲೆ, ಇವರೆಲ್ಲಾ ನರ್ಸುಗಳಾಗಿದ್ದರೆ? ಅವರುಗಳಹಾಗೆ ನಮ್ಮ ಹುಡುಗಿಯರು ಬೆಳೀಬೇಡವೆ?"

ಎಲ್ಲರೂ ನಗುತ್ತಾ ಹೊರಕ್ಕೆ ಬಂದೆವು. ಆಸ್ಪತ್ರೆಯು ಮುಚ್ಚುವ ಹೊತ್ತೂ ಆಗಿದ್ದರಿಂದ ಎಲ್ಲರೂ ಮೇವಿನಹಳ್ಳಿಯೊಳಕ್ಕೆ ನಡೆದೆವು.

— "ಕೇಫ".

ಹಾದಿಯಲ್ಲಿ ಕೇಳಿಸಿದುದು

"ಯಾಕೆ ವದರಕೊಳ್ತಿಯೋ? — ಮನುಷ್ಯ ಅಂದ್ರೆ ನೋಡು ಬಾತುಕೋಳೀಹಾಗಿರಬೇಕು. ಜನರಿಗೆ ಕಾಣೋಹಾಗೆ ಗಂಭೀರವಾಗಿರಬೇಕು. ಅದು ನೀರಿನೊಳಗೆ ಕಾಲುಗಳ್ನ ವದರಕೊಳ್ಳೋದು ನಮಗೆ ಕಾಣುತ್ಯೇ?"

— "ಕೇಫ".



"ಮಿತ್ರಮೇಳ"ದವರು "ಊರ್ವಶಿ ಮಾನಭಂಗ" ಆಡ್ತಾರೆ ಸಾರ್! ೧೦ ರೂಪಾಯಿನ ಟಿಕೆಟ್ ಕೊಡಲೋ? ಇಪ್ಪತ್ತರದೋ?

ಇಪ್ಪತ್ತರದೇ ಇರಲಪ್ಪ! ಕುತೂಹಲ ಬಲು ಕೆರಳಿದೆ!!

ಹಳೇಬಾಗಿನ ಕಂಬಿ

ಏಕಾಂಕ ನಾಟಕ

("ಹಳೇಬಾಗಿನ ಕಂಬೀ" ಎಂಬ ಕೂಗು ಕೇಳಿಬಂದೊಡನೆಯೇ ಕುಪ್ಪಮ್ಮನವರು ದಾವಡಿಸಿ ಬಂದು ಈ ಗಡಿಬಿಡಿಯನ್ನಾರಂಭಿಸುವರು)

ಏ ಜ್ಯೋತೀ, 'ಹಳೇಬಾಗಿನ ಕಂಬಿ' ಹೋಗ್ತಾಯಿದೆ....ಕೂಗು!....ಬೇಗ ಬೇಗ!.. ....ಎಲ್ಲಿ ಜಾಗಬಿಡೋ ರಾಜು, ಅಪ್ಪನ್ಪಂಚೆಗಳ್ನೆಲ್ಲ ಸ್ವಲ್ಪ ಕಿತ್ಕೊಗ್ಜಿ ನೋಡೋಣ .. ಏನಂದೇ? ಅಪ್ಪನ order ಯಿಲ್ದೇ ನನ್ನ ನ್ನಾ ಬೀರು ಹತ್ರ ಬಿಡೋದಿಲ್ವೇ! ಹೋಗೋ ಹೋಗೋ, ಆ ಪಂಚೆಗಳ್ನೆಲ್ಲ ನಿಮ್ಮಪ್ಪನ್ಗೆ ನಮ್ಮಪ್ಪನ್ಮನೇನಲ್ಲೇ ಕೊಟ್ಟಿದ್ದು ಗೊತ್ತೇ?....ಶಾಂತೀ ತಾರೆ ಮೇಲಿರೋ ನನ್ಹಳೇ ಸೀರೇನಾ....ಆ! 'ಇನ್ನಾ ಒಂದಷ್ಟು ದಿನ ಉಟ್ಕೊಂಡ್ಹರೀ, ಹಳೇಬಾಗಿನ ಕಂಬೀಗೇನವಸರವಿಲ್ಲ' ಅಂತ್ಲಾ ಗೋಣಗಿದ್ದು! ಅಲ್ವೇ, ಅಂಚ್ಪಕ್ಕ, ಸೆರಗ್ಪಕ್ಕ ಎಲ್ಲಾ ಹೋಗಿಬ್ಬಿಟ್ಟಿದೆ, ಅಂಥಾದ್ದನ್ನುಟ್ಕೊಂಡ್ರೆ ನಮ್ಮಮ್ಮ ಸುಮ್ನಿರ್ತಾರಾ! (a pause) ಹಾಗೆ ಕೊಡಿಲ್ಲಿ ನನ್ನ ಪೀತಾಂಬರದ ಲಂಗ, ಕೆಂಪ್ಲಂಗ, ಕನಕಾಂಬರದ ಲಂಗ ಮೂರನ್ನೂ....ಕೊಡಲ್ವಂತೆ ಕೊಡಲ್ಲ! ಪೂರ್ತಿ ಚಿಂದಿಯಾಗೋವರ್ಗೂ ಉಡೋದಿಕ್ಕಿಂತ, ಸ್ವಲ್ಪ ಸ್ವಲ್ಪ ಹರ್ದಿರೋ ಹಂಗೇ ರವಾನೆ ಮಾಡ್ಬಿಟ್ರೆ ಹೊಸ್ಲಂಗ ಬರೋದ್ರ ಜೊತೇಗೆ ದಿವನಾದ ಡಬ್ಬಗಿಬ್ಬನೂ ಬರತ್ತೇ (with emphasis) ಆದೀಗ ಜಾಣ್ತನ!.... (ಮುಂದಿನ ಕೋಣೆಯಬಳಿ ಬಂದು ವ್ಯಸನದಿಂದ) ಅನ್ಯಾಯ ಮೀನ, ನನ್ನ ಉಪದೇಶದ ಪ್ರಕಾರವಾಗಿ ಮಟ್ಟಿಗೆ ನೀನೂ ನನ್ಹಂಗೆ ಧರ್ಮಾವರದ ಸೀರೆಗಳ್ನ ಉಟ್ಟಿದ್ರೆ ಎಷ್ಟು ಚೆನ್ನಾಗಿರ್ತಾ ಇತ್ತು! ಬಾಳಿಕೆ ಬರೋದ್ರ ಜೊತೇಗೆ ಅದ್ರ ಕೆಲ್ಸ ಮುಗಿದ ತಕ್ಷಣ ಬರೋದೊಂದು ಪಾತ್ರೆ........ (ಜರುಬಾಗಿ) ಯಾಕಂತೆ ಯಾಕೋ! ಅಮ್ಮಾವ್ರು ಸಂಸಾರಕ್ಕೋರಟ ತಕ್ಷಣ ಕಳಿಸ್ಬೇಡ್ವೇನೋ ನಾವೊಂದು ಗೋಪರಾನ ('ಢಭಾರ್' ಅಂತ ಅವಳು ಬಾಗಿಲು ಹಾಕಿಕೊಳ್ಳಲು, ಮತ್ತೂ ಸಿಟ್ಟಿನಿಂದ) ಓಹೊಹೋ ಮುಚ್ಕೊಳೇ ಬಾಗ್ಲನ್ನ.. ನಾನೇನು ನಿನ್ನೋದಿಗೆ ಭಂಗ ಮಾಡೋಲ್ಲ ... (ಎಲ್ಲಾ ಕಟ್ಟಿಕೊಂಡು ಬೀದಿಬಾಗಿಲಿಗೆ ಹೋಗುವರು. ವ್ಯಾಪಾರಗಾರನನ್ನು ಉದ್ದೇಶಿಸಿ) ಎಲ್ಲಾನ್ನೂ ತೆಗೀಪ್ಪಾ ನೋಡೋಣ ... ಆ ತಪ್ಪಲೇನ ತಾ ಇಲ್ಲಿ ...ಉಹು....ಇದು ತುಂಬಾ ಚಿಕ್ದು.... (ಖಡಾಖಂಡಿತವಾಗಿ) ಉಹೂಂ .... ಕೊಟ್ರೇ ದೊಡ್ಡದ್ನ ಕೊಡು .... ಕೊಡ್ದಿದ್ರೇ ಹೋಗಪ್ಪೇ, ನಿನ್ಪಾತ್ರೇಗೇ ನಾವ್ಯಾಕಿದಿದೇವೇನೋ!

ಆರೇರೆ ಎಷ್ಟು ಚೆನ್ನಾಗಿದೆ ಈ ಕಂಚಿನ ದಬರಿ! ಉಹು, ನಂಗಿದೇ ಬೇಕು.... ಉಹು, ನಂಗಿದೇ ಬೇಕು....ಹು, ಏನ್ಮಾಡೋದು, ಶಾಂತೀ, ಆ ಕಾಲರ್‌ತನ್ಕ ಹರ್ದಿರೊ ಷರಟ್ನೆ ತಂದ್ಹಾಕೆ........ (ಪಾತ್ರೆ ಕೊಟ್ಟು ಆತ ಹೊರಡಲು) ಉ ಹೀಗೇ ಬರ್‍ತಾ ಇರಪ್ಪಾ.... ...

(ನೆರೆಮನೆ ಸುಬ್ಬಮ್ಮ ಕಾಣಲು ಜಂಬದಿಂದ ಕೂಗುವರು)

ನೋಡಿದ್ರಾ ಸುಬ್ಬಮ್ನವರೇ ನಾ ತಗೊಂಡಿರೋ ಕಂಚಿನ್‌ದಬರೀನಾ?... .... ಅಪ್ಪಟ ಕಂಚೂಂದ್ರೇ ಅಪ್ಪಟ .. ... (ಉತ್ಸಾಹದಲ್ಲಿ ಕೈತಪ್ಪಿ ಕೆಳಗೆ ಬೀಳಲು ಮಹಡಿಯ ಮೆಟ್ಟಲಿನಂತೆ ಧ್ವನಿ ಮಾರ್ಪಡುತ್ತಾ ಬರುವುದು) ಅಯ್ಯಯ್ಯೋ ಇದೇನಿದು! ಕೈತಪ್ಪಿ ...ಜಾರ್‍ಕೊಂಡು....(ರೋದನೆ) ಚುಕ್ಕಾ ಚೂರು! (ಕುಸಿದು ಬೀಳುವರು)

— ಶ್ರೀಮತಿ ಪಂಕಜ.



ಅಲ್ಲವ್ರೋ! ಇಷ್ಟು ಪತ್ರಿಕೆಗಳಿಗೂ–ಚೌ ಎನ್‌ಲೈ–ನೆಹ್ರೂ ಅವರ ಭಾಷಣಗಳಿವೆ – ಐನ್‌ಸ್ಟೈನ್‌ರವರ ಚರಿತ್ರೆ ಇದೆ – ನವ್ಯಕಾವ್ಯಗಳಿವೆ- ಕೊರವಂಜಿಗಳಿವೆ ಅಷ್ಟಕ್ಕೂ ಎರಡೇ ಆಣೇನೇ?

ನಾಗವರ್ಮನ ಮರಣ

(ಚಾವುಂಡರಾಯನು ನಾಗವರ್ಮನನ್ನು ಕೊಂದದ್ದು ಏಕೆ? ಎಂತು?)

'ತಮ್ಮ ನಾಗವರ್ಮನಂ ಕೊಂದುದರಿಂ ಚಲದಂಕ ಮಲ್ಲಂ' ಆದನಂತೆ ಅಣ್ಣ ಚಾವುಂಡರಾಯ. ಆದರೆ, ತಮ್ಮ ನಾಗವರ್ಮನಾದರೋ,

ಅರಸಂ ರಕ್ಕಸ ಗಂಗಂ
ಗುರುಗಳ್ ನೆಗಳ್ದ ಜಿತಸೇನ ದೇವರ್, ದಯೆಯಿಂ
ಪೊರೆವ ನೃಪನಣ್ಣ ನೆನೆಮ
ಚ್ಚರಿಸುವರಾರ್? ನಾಕಿಯಿರುಳೊಳೇಂ ಪುಟ್ಟಿದನೇ?

ಎಂದು ಅಣ್ಣನನ್ನು ತಾರೀಫ್ ಮಾಡುತ್ತಾನೆ.

ಚಾವುಂಡರಾಯನು ಜೈನ ನಾಗವರ್ಮ ಬ್ರಾಹ್ಮಣನೆಂಬುದು ಖಚಿತ. ಅವರು ಅಣ್ಣತಮ್ಮಂದಿರಾದುದು ಹೇಗೆ? ಆದಮೇಲೆ ಅಣ್ಣ ತಮ್ಮನನ್ನು ಕೊಂದುದೆಂತು? ಏಕೆ? ತಮ್ಮನನ್ನು ಕೊಂದವನು ಚಲದಂಕ ಮಲ್ಲನೇ? 'ಜೀವದಯೆಯೆ ಜಿನಧರ್ಮಂ' ಆದರೆ ಖಾಸಾ ತಮ್ಮನನ್ನು ಕೊಂದವನು ಅದರಲ್ಲಿ ಉಳಿಯಬಹುದೇ? ಚಲದಂಕ ಮಲ್ಲನು ಸ್ವಮತ ಬಾಹಿರನಾಗಲಿಲ್ಲವೇ?

ಇದೊಂದು ಕಗ್ಗಂಟು. ಕವಿಚರಿತಕಾರರು ಹೇಳುತ್ತಾರೆ 'ನಾಗವರ್ಮನೂ ಜಿನಭಕ್ತರಾಯನ ತಮ್ಮ. ಆದರೆ ಪರಮತ ಪ್ರಾವಣ್ಯವನ್ನವನು ಕೋರಿರಬಹುದು. ಆಗ ರಾಯನು ತಮ್ಮ ನಾಕಿಯನ್ನು ಕೊಂದಿರಬಹುದು' ನೀವು ಇದನ್ನು ಒಪ್ಪಬಹುದು. ನಾನು ಒಪ್ಪಲಾರೆ. ಒಪ್ಪುವುದಿಲ್ಲ. ಒಪ್ಪಿರಲಿಲ್ಲ. ನಾನು ಅದೇ ಮಾತನ್ನು ಕವಿಚರಿತಕಾರರಿಗೆ ಹೇಳಿದೆ. ಆದರೆ ಅವರು ಕೇಳಲಿಲ್ಲ. ಈಗ ಏನಾಗಿದೆ! ಕವಿಚರಿತೆಯ ತುಂಬಾ ಈ ಬಗೆಯ ಜಟಿಲ, ಸಂಶಯಗಳು ತುಂಬಿಕೊಂಡಿವೆ. ನಾನೇನು ಮಾಡಲಾದೀತು? ಅವನ್ನೆಲ್ಲಾ ಬಿಡಿಸುತ್ತಾ ಕುಳಿತುಕೊಳ್ಳಲೇ? ಸಾಧ್ಯವಿಲ್ಲ. ಇದೊಂದನ್ನು ಬಿಡಿಸುತ್ತೇನೆ.

ನಾಗವರ್ಮನ ಜನನದ ಬಗೆಗೆ ಯಾವ ವಿವರಣೆಯೂ ಇಲ್ಲ. 'ನಾಕಿ ಇರುಳೊಳೇಂ ಪುಟ್ಟಿದನೇ?' ಎಂದು ನಾಗವರ್ಮನೇ ತನ್ನ ಜನನದ ಬಗೆಗೆ ಸಂದೇಹ ಸೂಚನೆ ಮಾಡಿರುವುದರಿಂದ, ಅವನು ಇರುಳೊಳ್ ಪುಟ್ಟಿದನೋ, ಪಗಲೊಳೋ ಸಂಜೆಯೊಳೋ ಎಂಬ ವಿಷಯ ಚಿಂತನೆ ವ್ಯರ್ಥ, ಅನವಶ್ಯಕ. ಹುಟ್ಟಬಾರದಿತ್ತು ಹುಟ್ಟಿದ. ಹುಟ್ಟಿದವ, ನೆಟ್ಟಗೆ ಬದುಕಿರಲಿಲ್ಲ. ಅಣ್ಣನ ಕೈಯಿಂದಲೇ ಮರಣವನ್ನಪ್ಪಿದ. ಅಯ್ಯೋ ದುರ್ದೈವಿ! ನಿನ್ನ ವಿಧಿಹತಕ ಜೀವನವು, ಮಾನವ ಜೀವಿತದ ದುಹತತೆಯ ಪ್ರತಿನಿಧಿಯಾಗಿ, ಕರಾಳಛಾಯೆಯನ್ನು ಕವಿಸುತ್ತಿದೆ.

ಹುಂ; ಸರಿ. ಅತ್ತರೆ ಸತ್ತನಾಗವರ್ಮನ ಕೊಲೆಯ ಪತ್ತೆ ಆದೀತೇ. ಇರುವ ಕ್ಲೂಗಳಿಂದಲೇ ಆ ರಹಸ್ಯ ಭೇದವಾಗಬೇಕು.

ನಾಗವರ್ಮ ದುರಂತವು ಹೀಗಾಗಿರಬಾರದೇಕೆ?

(೧) ರಾಯನು ಗೊಮ್ಮಟೇಶ್ವರ ವಿಗ್ರಹವನ್ನು ಕೆತ್ತಿಸಿದನು. ಮಹಾಮಸ್ತಕಾಭಿಷೇಕ ಇನ್ನು ನಾಳೆ ನೆರವೇರಬೇಕು. ಆ ದಿನ ಒಂದು ಸಭೆ ಏರ್ಪಟ್ಟಿತು. ನವ್ಯಕವಿ ನಾಕಿಯೇ ಮುಖ್ಯ ಭಾಷಣಕಾರ; ಅಣ್ಣರಾಯನು ಈ ರೀತಿಯಾಗಿ ಪರಿಚಯ ಭಾಷಣ ಮಾಡಿರಬಹುದು.

'ಭವ್ಯರೇ, ಮಹನೀಯರೆ. ಮಹಿಳೆಯರೇ ಇತ್ತಬನ್ನಿ. ಇಂದು ನಾವೆಲ್ಲರೂ ಇಲ್ಲಿ ಸೇರಿರುವುದು ಏಕೆ? ಗೊಮ್ಮಟನು ದೀಕ್ಷೆಗೊಂಡು ಮೋಕ್ಷಕ್ಕೆ ಸಂದನು. ನಾಕಿಯಿಂದು ಶಿಖರಾಗ್ರಕ್ಕೆ ಬಂದನು. ಏಕೆ? ನಾನೂ ಅರಿಯೆ ನೀವೂ ಅರಿತಿಲ್ಲ. ಮಹನೀಯರೇ ಮಹಿಳೆಯರೇ ಇತ್ತ ಬನ್ನಿ........'

ಮುಂದೆ ಈ ಭಾಷಣ ಹೇಗೆ ಹರಿಯಿತೋ ನಾನು ಅರಿಯೆ. ಆದರೆ ನಾಕಿಯ ಪರಿಚಯ ಮಾಡಿಕೊಡುತ್ತಾ ರಾಯನು 'ಭವ್ಯರೇ 'ಗುಣವರ್ಮನ, ನಾಗವರ್ಮನ, ಶಂಖವರ್ಮನಧ್ವಾನಂಗಳ್' ಎಂದು ಕೇಳಿರುವಿರಿ. ಆಮೂರು ಅಧ್ವಾನಂಗಳಲ್ಲಿ ಇದೊಂದು' ಎಂದು ನಾಕಿಯಕಡೆ ಬೆಟ್ಟು ತೋರಿಸಿರಬಹುದು. ಆಗ ನಾಕಿಗೆ ಅಪಮಾನವಾಗಿ, ಕ್ರೋಧೋತ್ಪತ್ತಿಯಾಗಿ

ಮೇಲೆ ಬಿದ್ದು ನಿನ್ನ ನೀಗಲೆ
ಬೀಳ ಹೊಯ್ವೆನು ನಿನ್ನ ಹೊಟ್ಟೆಯ....ಎಂದೊದರುತ್ತಾ

ಅವನು ರಾಯನಮೇಲೆ ಕೈಮಾಡಿರಬಹುದು. ಆಗ ರಾಯನು ರಿವಾಲ್ವರಿನಿಂದ ನಾಕಿಯನ್ನು ನರಕಕ್ಕೆ ಅಟ್ಟಿರಬಹುದು.

ಒಪ್ಪಿದಿರಾ. ನೀವು ಒಪ್ಪಬಹುದು. ನಾನು ಒಪ್ಪಲಾರೆ. ಇಂತಹ ಹುಚ್ಚು ಕತೆಗೆ ಒಪ್ಪಿದರೆ, ನಾನು ಮೊದಲು ವ್ಯಕ್ತಪಡಿಸಿದ ಸಂದೇಹ ಮಾಲೆಗಳಲ್ಲಿ ಒಂದಕ್ಕೂ ಉತ್ತರ ದೊರೆಯಲಾರದು.

ಹೀಗಿದ್ದೀತೆ:....

(೨) ಜೀವದಯಾಷ್ಟಮಿಯ ಮರುದಿನ. ಶ್ರಾವಕ ಜನದೊಡನೆ ಉಪವಾಸ ಮಾಡಿದ ಅಣ್ಣ ಚಾವುಂಡರಾಯನು, ಯಶೋಧರ ಚರಿತೆಯನ್ನು ಕೇಳಿ ಕಿವಿಗಳಿಗೆ ಪಾರಣೆ ಮಾಡಿಕೊಂಡು, ಜಿನಮಂದಿರದಿಂದ ಮನೆಗೆ ಬಂದ. ಹೊಟ್ಟೆಯು ನನಗೆಂದು ಪಾರಣೆ ಎಂದು ಕೇಳುತ್ತಿತ್ತು. ಹೆಂಡತಿಯು ತವರುಮನೆಗೆ ಹೋಗಿದ್ದಳು. ಅಣ್ಣನು ಕಂಗೆಟ್ಟನು. ಅಲ್ಲಲ್ಲಿ ಹುಡುಕಿ ಜೋಳದ ದಂಟು, ತೊಗರಿಯಕಡ್ಡಿಗಳನ್ನು ಜಮಾಯಿಸಿ ಒಲೆ ಹೊತ್ತಿಸಿ ತಾಲಿಪಿಟ್ಟುಮಾಡಿದ. ಕಾಫಿಗೆ ಡಿಕಾಕ್ಷನ್ ಹಾಕಿದ. ಆದರೆ ಹಾಲು ಇರಲಿಲ್ಲ. ಆಗ ಪ್ರಗತಿಶೀಲರ ಮನೆಗೆ ಹಾಲು ತರಲು ಹೋದ. ಬರುವಷ್ಟು

ರಲ್ಲಿ ನಾಕಿಯು ಹಿತ್ತಿಲ ಬಾಗಿಲಿನಿಂದ ಬಂದು ತಾಲಿಪಿಟ್ಟು ತಿಂದು, ಕೊನೆಯ ಚೂರನ್ನು ಬೆಕ್ಕೊಂದರ ಬಾಯಲ್ಲಿಡುತ್ತಿದ್ದ. ರಾಯನ ಕೋಪ ಬ್ರಹ್ಮರಂಧ್ರಕ್ಕೇರಿತು. ಪಿತ್ತ ಕೆರಳಿತು. ನಾಕಿ ನರಕಕ್ಕೆ ಸಂದನು. ಸಾಧ್ಯ; ಆದರೆ ನಮ್ಮ ಮೂಲಭೂತ ಪ್ರಶ್ನೆಗಳೊಂದಕ್ಕೂ ಇದರಿಂದ ಉತ್ತರ ದೊರೆಯಲಿಲ್ಲ ಕಗ್ಗಂಟು ಬ್ರಹ್ಮಗಂಟಾಯಿತು. ಹೀಗೆ ಇರಲಿಕ್ಕೆ ಸಾಕಲ್ಲವೆ?

ಅಣ್ಣ ರಾಯು, ತಮ್ಮ ನಾಕಿ, ಇಬ್ಬರೂ ಬ್ರಹ್ಮಚಾರಿಗಳಾಗಿ ಪಲಕಾಲ ಸುಖದೊಳಿರ್ದರು. ಅಣ್ಣನ ಮದುವೆಯಾಯಿತು ನಾಕಿಗೆ ದುರ್ದೈವ ವಶಾತ್ ಬ್ರಹ್ಮಚರ್ಯವೇ ಬಹುಕಾಲ ಪ್ರಾಪ್ತಿಯಾಗಿತ್ತು. ಆಗ ವಸಂತಕಾಲ ಬಂತು. ಕೋಗಿಲೆ ಕೂಗಿತು. ಮಾಂದಳಿರ ಸವಿಯುಂಡು ಮೈಮರೆದ ಬುಲ್ಬುಲನು ಚಿಲುಗುಲಾಬಿಯ ನನೆಯ ನರಳಿಸಲು ಮೊದಲು ಮಾಡಿದನು ದುಂಬಿಯು ಅರ್ಥಸ್ವಾರ್ಥಗಳೊಂದೂ ಇಲ್ಲದ ಭಾವಗೀತೆಯನ್ನು ಹಾಡಲಾರಂಭಿಸಿತು. ನಾಕಿಗೆ ಕಲ್ಪನಾವಿಲಾಸವು ತಡೆಯಲಾರದಷ್ಟು ಜೋರಾಗಿ ಆರಂಭವಾಯಿತು.

ಜವಾನೀ ಬೀತಜಾಯೇಗೀ–ಏ–
ರಾತ ಫಿರ್ನ ಆಯೇಗಿ

ಎಂದವನು ಹಾಡಲಾರಂಭಿಸಿದ. ನಡುರಾತ್ರಿಯಲ್ಲಿ 'ಅರೇ ಮೇರೆ ಲೈಲಾ' ಎನ್ನುತ್ತಾ ಕನವರಿಸಿದ. ಅಣ್ಣನಿಗೆ ಇನ್ನು ತಮ್ಮನನ್ನು ಹಾಗೇ ಬಿಡಬಾರದು ಎಂಬ ಜ್ಞಾನೋದಯವಾಯಿತು. ಹೋಗಿ ಹೆಣ್ಣು ನಿಶ್ಚಯಿಸಿಕೊಂಡು ಬಂದ. ವರದಕ್ಷಿಣೆ, ಉಪಚಾರ ಇತ್ಯಾದಿಯೆಲ್ಲಾ ಸೆಟ್ಲ್ ಆಯಿತು. ಆದರೆ ನಾಕಿ ತಾನು ಹೆಣ್ಣು ನೋಡದ ಹೊರತು ಮದುವೆಯಾಗುವುದಿಲ್ಲವೆಂದ. ಒಳ್ಳೇ, ಯಮಗಂಡ ಕಾಲದಲ್ಲೇ ಹೆಣ್ಣು ನೋಡಿಕೊಂಡು ಬಂದ.

ರಾಯು, ಹಿಂತಿರುಗಿ ಬಂದವನನ್ನು ಕೇಳಿದ 'ಹೇಗಿದೆ ತಮ್ಮ ಹೆಣ್ಣು' 'ಏನು ಹೇಳಲಣ್ಣ. ಅಂಕುಶದಿಂದ ತಿವಿಸಿಕೊಂಡ ಆ ಬನವಾಸಿಯ ಕವಿ ಹೇಳಿಲ್ಲವೇ? 'ಜಗಮಂ ಮಾಡಿದ ಪದ್ಮಜಂ ಪಡೆದನಿಲ್ಲೀ ಕನ್ನೆಯಂ' ಎಂದು ಆ ರೀತಿಯೊಳಿರ್ಪಳು. ಕರಿಬಂಟನ ತಂಗಿ,' ಎಂದು ತಮ್ಮ ಉತ್ತರಿಸಿದ.

ಅಣ್ಣ ಹೇಳಿದ 'ಬಣ್ಣದಲೇನಿದೆಯೋ ಬೆಡಗು? ಹೆಣ್ಣಿಗೆ ಗುಣವೇ ಚಿನ್ನದ ಮೆರುಗು' ಎಂದು. ತಮ್ಮ ಒಪ್ಪಲಿಲ್ಲ. ತನಗೆ ಕಳಹಂಸಾಲಸಯಾನೆಯೇ ಆಗಬೇಕು ಎಂದ. ಪಲ್ಲವಾಧರೆಯಲ್ಲದಿದ್ದರೆ ಒಲ್ಲೆನವಳನು ಎಂದ.

'ಭಾರ್ಯಾ ರೂಪವತೀ ಶತ್ರುಃ' ಎಂದರೂ ಕೇಳಲಿಲ್ಲ. ಆಗ ಸೋದರನ ಮನ ಕದಡಿದವು. ದಾಯಾದ ವಿಷಯದ ಹುಳುಕುಗಳೆಲ್ಲಾ ಹೊರಬಂದವು. ಮಾತಿಗೆ ಮಾತು ಮಥಿಸಿತು. ವಿಧಿ ಆತುಬಂತು.

ಇದರಲ್ಲಿ ಸಮಸ್ಯೆಯ ಕೆಲವು ಕೋನಗಳಿಗೆ ಉತ್ತರ ದೊರೆಯುತ್ತದೆ. ಆದರೆ ಚರೈ ವೇತಿ ಚರೈ ವೇತಿ ಎಂದು ಉಪನಿಷತ್ತುಗಳು ತಮಟೆ ಬಡಿಯುತ್ತಿವೆ.

Stop not till the goal is reached ಎಂದು ಹೇಳಿದಾರೆ. ಯಾರು ನನಗೂ, ನಿಮಗೂ ಹಿರಿಯರಾದ ಶ್ರೀ........ಮರೆತುಹೋಯಿತು

ಈ ರಹಸ್ಯದ ಕ್ಲೂ ಇರುವುದು ನಾವು ಈ ಲೇಖನದಲ್ಲಿ ಮೊದಲು ಹೇಳಿದ ಪದ್ಯದಲ್ಲೇ, ಎಂಬುದು ಗಹನಚಿಂತನೆಯ ನಂತರ ನನಗೆ ಹೊಳೆಯಿತು.

ಚಾವುಂಡರಾಯನಿಗೆ ಅಣ್ಣನೆಂಬ ಬಿರುದಿದೆಯಷ್ಟೇ. ಹಾಗೆಯೇ ಯೋಚಿಸಿ ನೋಡಿದಲ್ಲಿ, ಮೋಟರು ಡ್ರೈವರುಗಳನ್ನು ಅಣ್ಣ ಎಂದು ಕರೆಯುವುದು ವಿಶೇಷವಾಗಿ ರೂಢಿಯಲ್ಲಿದೆ.

ಉದಾಹರಣೆಗೆ:—

ಡ್ರೈವರ್–ಅರೇ ಜಬ್ಬರ್ ಪಾನಿ ದಾಲ್ಕು, ಹ್ಯಾಂಡ್ಲ್ ಮಾರ್‌ರೇ.

ಜಬ್ಬರ್ (ಕಂಡಕ್ಟರು)—(ಪಾನಿ ದಾಲ್ಕೇಕೆ ಔರ್ ಹ್ಯಾಂಡ್ಲ್ ಮಾರ್ಕೇಕೆ ಬಾದ್) ರೈಟ್ ಅಣ್ಣಾ ಸೀದ ಜಾನ್ದೊ.

ಹೀಗೆಯೇ ಕ್ಲೀನರುಗಳು ಕಂಡಕ್ಟರನ್ನು ಅಣ್ಣ ಎಂದು ಕರೆಯುವ ವಾಡಿಕೆ ಇದೆ. ಅಂದಮೇಲೆ ಚಾವುಂಡರಾಯನು ಕಂಡಕ್ಟರೋ, ಡ್ರೈವರೋ ಆಗಿರಬೇಕು, ಎಂಬುದು ಸ್ವಯಂವ್ಯಕ್ತ. ಈ ಅಂಶದ ಹಿನ್ನೆಲೆಯಲ್ಲಿ ಅರಸಂ ರಕ್ಕಸ ಗಂಗಂ.... ಎಂಬ ಪದ್ಯವನ್ನು ಪರಿಶೀಲಿಸಿರಿ. ರಕ್ಕಸ ಗಂಗನು, ಅರಸ ಎಂದರೆ ಒಡೆಯ ಎಂದರೆ ಪ್ರೊಪ್ರೈಟರಾಗಿದ್ದ. ಏತಕ್ಕೆ? ಬೇಲೂರಿಗೂ ಶ್ರವಣಬೆಳಗೊಳಕ್ಕೆ ನಡುವೆ ಓಡಾಡುತ್ತಿದ್ದ ರಕ್ಕಸಗಂಗ ಟ್ರಾನ್ಸ್‌ಪೋರ್ಟಿಗೆ. ಅಜಿತ ಸೇನರು (ನೆಗಳ್ದ!) ಏನಾಗಿದ್ದರು:- ಗುರುವಾಗಿದ್ದರು ಎಂದರೆ ಕಡೆಹಾಯಿಸುವವರು. ಏನನ್ನು? ಬಸ್ಸನ್ನು. ಅಂದಮೇಲೆ ಅವರು ಡ್ರೈವರಾಗಿದ್ದರು. ಆ ಬಸ್ಸನ್ನು ಪೊರೆವ-ಕಾಪಾಡುವ ನೃಪ-ಭೂಪತಿ, ಅಂದರೆ ಆ ಬಸ್ಸಿನ ಕಂಡಕ್ಟರು, ಅಣ್ಣ ಉರುಫ್ ಚಾವುಂಡರಾಯ, ಚಾವುಂಡರಾಯನು ಕಾಪಾಡುತ್ತಿದ್ದ ಅಪ್ರೆಂಟಿಸ್ ಕ್ಲೀನರೇ ನಾಕಿ ಅರ್ಥಾತ್ ನಾಗವರ್ಮ. ಈಗೆಲ್ಲಾ ರಹಸ್ಯಗಳೂ ಹೊರಬಿದ್ದ ಹಾಗಾಯಿತು.

ಇನ್ನೊಂದು ಗಮನಾರ್ಹವಾದ ಪದ್ಯಕ್ಕೆ, ತಪ್ಪು ಅರ್ಥಮಾಡಿದಾರೆ ಕವಿಚರಿತ್ರಕಾರರು ಅದೇ ಗುರುವೊಂದಾದಿಯೊಳುತ್ಪಲಂ........ಎಂಬ ಪದ್ಯ. ವಾಸ್ತವವಾಗಿ ಇದು ಛಂದೋಂಬುಧಿಯ ಪದ್ಯವಲ್ಲ. ನಾಗವರ್ಮನು ಬರೆದ 'ಸ್ವಚಲಿತ ರಥ ರಹಸ್ಯಂ' ಎಂಬ ಶಿಲ್ಪಶಾಸ್ತ್ರ ಪುಸ್ತಕದ ಪದ್ಯ. ಅದರ ಅರ್ಥ ಇದು:—ನಾಗವರ್ಮನು ತನ್ನ ಮನಃಪ್ರಿಯೆಯಾದ ಹರಿಣಾಕ್ಷಿಗೆ ಏನು ಹೇಳುತ್ತಿದ್ದನೆಂದರೆ—

'ಗುರುದ್ವಂದ್ವಂ ಲಘುದ್ವಂದ್ವಮಾಗಿರೆ ಮತ್ತೇಭಂ' ಎಂದು ಅರ್ಥ-ಬಸ್ಸಿನ ಹಿಂಭಾಗದಲ್ಲಿ ಎರಡು ಗುರುಗಳು-ಡಬಲ್ ಟೈರುಗಳು, ಮುಂಭಾಗದಲ್ಲಿ ಎರಡು ಸಿಂಗಲ್ ಟೈರುಗಳು ಇದ್ದರೆ, ಬಸ್ಸು ವೇಗವಾಗಿ ಮದಿಸಿದ ಆನೆಯಂತೆ ಚಲಿಸುತ್ತದೆ. ಅಲ್ಲದೆ,

'ಹರಿಣೀ ವೃತ್ತಮುದಕ್ಕು ಮೈದು ಲಘುವಿಂ'

ಅರ್ಥ– ಹಿಂದೆ ಒಂದು+ಒಂದು=2 ಮುಂದೆ ಒಂದು+ಒಂದು=2 ಅಂತೂ ನಾಲ್ಕು+ಒಂದು ಸ್ಟೆಪ್ನಿ, ಒಟ್ಟು ಐದೇ ಟೈರುಗಳಿದ್ದರೆ ಬಸ್ಸು ಬೆದರಿದ ಹರಿಣಿಯಂತೆ ಚಿಮ್ಮುತ್ತಿರುತ್ತದೆ.

ಹೀಗೆ ಅಣ್ಣರಾಯನು ಕಂಡಕ್ಟರಾಗಿಯೂ, ತಮ್ಮ ನಾಕಿಗನು ಕ್ಲೀನರಾಗಿಯೂ ಕಾವ್ಯರಚನೆ ಮಾಡುತ್ತಾ, ಸಂಸ್ಕೃತಿಯನ್ನು ಸಾಮಾನ್ಯರಲ್ಲಿ ಪ್ರಸರಿಸುತ್ತಿದ್ದರು.

ಹೀಗಿರಲು ರಾಯನಿಗೆ ತಾನೂ ಡ್ರೈವರಾಗಬೇಕೆಂಬ ಹುಚ್ಚುಹಿಡಿಯಿತು. ಅವನನ್ನು ತಡೆಯಲು ನಾಕಿಗನುಪಟ್ಟ ಪ್ರಯತ್ನಗಳೆಲ್ಲವೂ ವ್ಯರ್ಥವಾದವು. ಗುರುಗಳಾದ ಅಜಿತಸೇನರು ರಾಯನ ಕಾಟ ತಡೆಯಲಾರದೆ ಅವನಕೈಲಿ ಆಗಾಗ ಸ್ಟೀರಿಂಗ್ ಹ್ಯಾಂಡ್ಲ್ ಕೊಡುತ್ತಿದ್ದರು. ಆಗ ಬಸ್ಸಿನ ಗತಿ ಹೇಗಿರುತ್ತಿತ್ತೆಂದರೆ–

ಗುರುದ್ವಯ ತ್ರಿಲಘು ವಿಂದಕ್ಕುಂ ಮಹಾಸ್ರಗ್ಧರಂ, ಅಥವಾ
ಗುರುಮೊದಲ್ ಮೂರಾಗೆ ಶಾರ್ದೂಲಂ–ಎನ್ನುವಂತೆ.

ನಾಕಿಗನು ರಕ್ಕಸಗಂಗನಿದುರಿನಲ್ಲಿ ದೂರುಕೊಟ್ಟ. ಅಜಿತಸೇನರಿದುರಿನಲ್ಲಿ ಗೋಗರೆದ. ಅಣ್ಣನ ಕಾಲುಹಿಡಿದ. ಆದರೆ ಚಾವುಂಡನ ಹಟ ಬದಲಾಗಲಿಲ್ಲ.

ಕಾಲ ಉರುಳಿತು. ರಕ್ಕಸಗಂಗ ಟ್ರಾನ್ಸ್‌ಪೋರ್ಟ್ ಹಳೆಯದಾಯಿತು. ಅದರಲ್ಲೇ ಕುಳಿತಿದ್ದರಿಂದ 'ನಂದಿಸೇನ ಪ್ರವರ ಮುನಿವರ್ರ ದೇವಲೋಕಕ್ಕೆ ಸಂದಾನ್'. ಇನ್ಶೂರೆನ್ಸ್ ಮಾಡಿಸಿಯೇ ಬಸ್ಸಿನಲ್ಲಿ ಓಡಾಡಿರಿ ಎಂದು ರಾಯ, ನಾಕಿಗರ ಮನಃ ಪ್ರಿಯೆಯರು ಒತ್ತಾಯಪಡಿಸಲಾರಂಭಿಸಿದರು.

ಒಂದು ದಿನ. ಕನ್ನಡಸಾಹಿತ್ಯಕ್ಕೆ ದುರ್ದಿನ. ಬೇಲೂರಿನ ಸಂತೆ. ಅಜಿತಸೇನರೂ, ರಕ್ಕಸ ಗಂಗನೂ ಹೊಸಬಸ್ಸು ತರಲು ಬೆಂಗಳೂರಿಗೆ ಹೋಗಿದ್ದರು ರಾಯನೇ ಬಸ್ಸಿಗೆ ಡ್ರೈವರಾದ. ಇಂದು ಬಸ್ಸ ನಡೆಸುವುದೇ ಬೇಡವೆಂದು ನಾಕಿಗ ಹೇಳಿದ. ಯಥಾಪ್ರಕಾರ ಅದು ವ್ಯರ್ಥವಾಯಿತು. ಅವನು ಅಂದು ಕಂಡಕ್ಟರಾದ. ಬಸ್ಸಿನೊಳಗೆ 'ತೀವಿದೌಂದುಂಬರ ದ್ರುಮದ ಫಲದಂತೆ' ಜನರು ತುಂಬಿದ್ದರು. ಹ್ಯಾಂಡ್ಲ್ ಹೊಡೆದನಂತರ ನಾಕಿಯು ನಡುಗುವ ಧ್ವನಿಯಿಂದ ರರ್ರೈಟ್ ಎಂದ. ಶ್ರವಣಬೆಳುಗೊಳ ಹಿಂದಾಯಿತು. ಮುಂದೊಂದು ತಟಾಕ. ಬಾಯಾರಿಸಿದ್ದ ಆ ಬಸ್ಸು ಆ ಕಡೆ ನುಗ್ಗಿತು. ರಾಯ ಹಲ್ಕಚ್ಚಿ ಕ್ಲಚ್ಚ್, ಬ್ರೇಕ್, ವ್ಯಾಕ್ಯೂಮ್ ಗರೂ ನಿಷ್ಫಲ. ಬಸ್ಸು ನುಗ್ಗಿತು ನಾಕಿಯತಲೆ ಪಕ್ಕದ ಮರಕ್ಕೆ ಬಡಿದು ಅವನು ಓಂಕಾರದಲ್ಲಿ ಲೀನನಾದ. ರಾಯನು ಬೆದರದೆ ನೀರು ಕುಡಿಸಿದ ಬಸ್ಸನ್ನು ವಾಪಸು ತಂದ. ಚಲದಂಕ ಮಲ್ಲನಾದ.

—ಅ. ರಾ. ಸೇ.

ತಪ್ಪದಾರದು?

(ಚಿಕದೇವ ಪ್ರಭುವಿಗೆ ನಮೋ ಎಂದು)

ತಪ್ಪದಾರದು! ತಿಳಿದುನೋಡೆ ತಪ್ಪದಾರದು!
ಪೇಪರಲ್ಲಿ ನಂಬರಿರದೆ ಫೇಲು ಎಂದು ಇವರು ಕೊರಗಲು
ತಪ್ಪದಾರದು!

ಗೀಚಿಕೊಟ್ಟದ್ದ ಈ ಹೀಚುಗಳ ತಪ್ಪೋ
ರೊಚ್ಚೆದ್ದು ತಿದ್ದಿದ ಮೇಷ್ಟರ ತಪ್ಪೋ
ಮೋರೆಯರಿಯದೆ ಮೆರೆದ ಹೈಕಳ ತಪ್ಪೋ
'ಪ್ಯಾಸಾಗುವಿರಿ' ಎಂದ ಜೋಯ್ಸರ ತಪ್ಪೋ
ತೊಂಡನಲೆಯುತಿದ್ದ ಗೂಳಿಯ ತಪ್ಪೋ
ಕಂಡು ಕಾಯದ ತುರುಗಾಹಿಯ ತಪ್ಪೋ
ಫೈಲಿಲ್ಲವೆಂದು ತೊಡೆತಟ್ಟಿದ್ದೆ ತಪ್ಪೋ
ಕೊಂಡಾಡಿದ ಅವರಜ್ಜಿಯ ತಪ್ಪೋ
ಮಜವಲ್ಲಿ ಮುಳುಗಿದ್ದ ಚಿಣ್ಣರ ತಪ್ಪೋ
ಅಂಕುಶ ಹಾಕದ ಅಪ್ಪನ ತಪ್ಪೋ
ತಾರಾ ಪತ್ರಿಕೆ ತರಿಸಿದ್ದೆ ತಪ್ಪೋ
ಬೀದಿಗೊಂದಾಗಿರುವ ಸಿನಿಮಾದ ತಪ್ಪೋ
ಕಾದಂಬರಿಗಳ ಕೊಂಡದ್ದೆ ತಪ್ಪೋ
ತಾನೊಂದು ಬರೆಯಲು ತೊಡಗಿದ್ದೆ ತಪ್ಪೋ
ಹೆಜ್ಜೆಗೊಂದಿರುವಂಥ ಹೋಟಲ ತಪ್ಪೋ
ಪಿಡಿಬಿಚ್ಚಿ ಎಲೆಗಳ ಹರವಿದ್ದೆ ತಪ್ಪೋ
ಕ್ಲಾಸಲ್ಲಿ ನಿದ್ದೆಯ ಹೊಡೆದಿದ್ದೆ ತಪ್ಪೋ
ಸಜ್ಜಾಗಿ ಬ್ಯಾಟನು ಬೀಸಿದ್ದೆ ತಪ್ಪೋ
ಗುರಿಯೇ ಇಲ್ಲದ ಬರಿ ಮನಸಿನ ತಪ್ಪೋ
ಗುರಿಯನ್ನು ಮನದಲ್ಲಿ ನೆಡದವರ ತಪ್ಪೋ
ಬುರುಡೇಲಿ ಬುದ್ಧಿಯೇ ಇರದಿದ್ದೆ ತಪ್ಪೋ
ಬೆಳಕನ್ನು ಅವರಿಗೆ ಕೊಡದವರ ತಪ್ಪೋ
ಸೋತು ಕುಂತ ಈ ತರಳರದೆ ತಪ್ಪೋ
ಸೋಲಿಗೆಳೆದ ಇನ್ನಾರದು ತಪ್ಪೋ
ತಾಯಿ ಸರಸತಿಯೊಲಿದ ಭಕ್ತರೆ ಪೇಳಿ
ತಪ್ಪಾರದೆಂದು ತಾವಾದರು ಹೇಳಿ.

— ರಾಮಿ.

ಕೀರ್ತಿ—ಕಾಟ

"ದೇವ್ ಆನಂದ್" ಅಂತ ಚಿಕ್ಕಪೇಟೆ ರಸ್ತೇಲಿ ಯಾವನೋ ಕಾಲೇಜ್ ವಿದ್ಯಾರ್ಥಿ ಕೂಗಿದ, ಸಂಜೆ ಐದುಗಂಟೇಲಿ. ಮುಂದಿನ ಜವಳಿ ಅಂಗಡಿ ಹತ್ತಿರಿದ್ದ ನಮ್ಮ ಸೋಮು ಹಿಂತಿರುಗಿದ, ಯಾರು ಏಕೆ ಹೀಗೆ ವಕ್ರವಾಗಿ ಹೊಡಕೋತಿದಾರೆ ಅಂತ ನೋಡುಕ್ಕೆ.

"ಅವನೇ! ದೇವ್ ಆನಂದ್" ಅಂತ ಆ ವಿದ್ಯಾರ್ಥಿ ಗಾಳಿಯಲ್ಲೇ ಮರ ಕೋತಿ ಆಡುವವನಂತೆ ನೆಗೆದಾಡುತ್ತಾ ಹಲ್ಲು ಹಲ್ಲು ಕಿರಿದು ಸೋಮುವಿನ ಹತ್ತಿರಕ್ಕೇ ಓಡಿಬರಹತ್ತಿದ.

ಇವನು ಯಾವನೋ ಹುಚ್ಚ! ದೇವ್ ಆನಂದ್ ನಾನು ಅಂತಭ್ರಮಿಸಿ ಮೇಲೆ ಬೀಳಲು ಬರುತ್ತಿದ್ದಾನೆ. ಹುಚ್ಚನ ಮನಸ್ಸು!, ಕೆನ್ನೆ ಕಟಕಾರಿಸಿದರೂ ಆಯಿತು, ಪರಾರಿಯೇ ನ್ಯಾಯ. ಎಂದು ಸೋಮು ಪಕ್ಕದ ಜವಳಿ ಅಂಗಡಿಯೊಳಕ್ಕೆ ನುಗ್ಗಿದ.

ಅಷ್ಟುಹೊತ್ತಿಗೆ ಹತ್ತಾರು ಯುವಕರು, ಇಪ್ಪತ್ತಾರು ಯುವತಿಯರು, ನೂರಾರು ಜನ ಆ ಅಂಗಡಿಗೆ ಮುತ್ತಿಗೆ ಹಾಕಿದರು "ದೇವ್ ಆನಂದ್ ಜವಳಿ ಅಂಗಡಿಗೆ ಬಂದಿದ್ದಾನಂತೆ, ನೋಡೋಣ ಬಾರೋ" ಅನ್ನುವುದೇ ಚಿಕ್ಕ ಪೇಟೆಯಲ್ಲೆಲ್ಲಾ ಕೇಳಿಬರುತ್ತಿದ್ದ ವೇದಘೋಷ.

ಜವಳಿ ಅಂಗಡಿಯವನು ಪೋಲೀಸಿನವರಿಗೆ ಹೇಳಿಕಳಿಸಿ, ಅವರು ಬಂದು, ಈ ಗಲಾಟೆಯನ್ನು ತಹಬಂದಿಗೆ ತರಲು ಅರ್ಧಗಂಟೆಯಾಯ್ತು. ಸೋಮು ಬೆವರಿಳಿದು ಅರ್ಧವಾಗಿದ್ದ. ಜವಳಿ ಅಂಗಡಿಯವನು ಒಡೆದ ಬೀರುಗಳನ್ನು ನೋಡಿ ಇನ್ನೆಷ್ಟು ಸೀರೆಗಳನ್ನು ಲಪಟಾಯಿಸಿಕೊಂಡು ಹೋಗಿದ್ದಾರೋ ಎಂದು ಲಬೋ ಲಬೋ ನಡೆಸುತ್ತಿದ್ದ.

* * *

ನಾನು ದಿನವೂ ಆಚರಿಸುತ್ತಿರುವ ತಪಸ್ಸಿಗೆ ಮೆಚ್ಚಿ ದೇವರು ಪ್ರತ್ಯಕ್ಷವಾಗಿ ನಿನಗೇನು ವರಬೇಕು ಎಂದು ಕೇಳಿದರೆ, "ಮಹಾದೇವ ದಯವಿಟ್ಟು ಕೀರ್ತಿವಂತನನ್ನಾಗಿ ಮಾತ್ರ ನನ್ನನ್ನು ಮಾಡಬೇಡ, ಅದೊಂದೇ ವರ ಸಾಕು" ಎಂದು ಬೇಡಿಕೊಳ್ಳುತ್ತೇನೆ.

ಮೊನ್ನೆ ಕುವೆಂಪು ಸನ್ಮಾನ ಸಭೆಯಲ್ಲಿ ಶ್ರೀ ಕೃಷ್ಣಶಾಸ್ತ್ರಿಗಳು ಹೇಳಲಿಲ್ಲವೇ?." "ಕೀರ್ತಿ ಒಂದು ಶನಿಯಂತೆ ಅದು ಕಾಡಿಸಲು ಶುರುಮಾಡಿದರೆ ತಡೆಯೇ ಇಲ್ಲ. ಬೇಕು ನಿನ್ನ ಕಾಟ ಅಂತ ಹಾತೊರೆದರೆ ಹತ್ತಿರವೂ ಬರುವುದಿಲ್ಲ" ಅಂತ.

ಇದೆಲ್ಲಾ ಈಗಿನ ಕಾಲದ ಕೀರ್ತಿಗೆ ಅನ್ವಯಿಸುವುದು ದಿಟ.

ಆದರೆ ಹಿಂದಿನ ಕಾಲದಲ್ಲಿ!

ಕೃಷ್ಣದೇವಾಲಯದಲ್ಲಿ ಕೊಟ್ಟಾರೋತ್ಸವದ ಮುಖ್ಯದಿನ. ದೇವರಿಗೆ ದಿವ್ಯವಾದ ಅಲಂಕಾರ ಮಾಡಿದ್ದಾರೆ. ಪೂಜಾರಿಯು ದಿವನಾಗಿ ಅಷ್ಟಾದಶ ನಾಮ ಧರಿಸಿ ದೇವರಿಗಿಂತಲೂ ಬಿರುಸಾಗಿ ನಿಂತಿದ್ದಾನೆ. "ತಿರುಪ್ಪಾವೈ" ಘೋಷನಾದ ಗಗನವನ್ನೇ ಸೇರುತ್ತಿದೆ.

ಇವಕ್ಕೆಲ್ಲಾ ಹಿನ್ನೆಲೆಯಾಗಿ, ಅಗೋಚರವಾದರೂ, ಆಘ್ರಾಣಿಸಲು ಹಿತವಾದ, ಪುಳಿಯೋಗರೆಯ ವಾಸನೆ ಎಲ್ಲೆಲ್ಲೂ ಪಸರಿಸಿದೆ. ಆ ಜಾಡನ್ನೇ ಹಿಡಿದು ಬಂದ, ಕೇರಿಯ, ಊರಿನ ಯುವಕ ಯುವತಿಯರೆಲ್ಲರೂ ಆ ನಿಶಿರಾತ್ರಿಯಲ್ಲಿ ದೇವರ ಸೇವೆಗೆಂದು ಕಿಕ್ಕಿರಿದು ನೆರೆದಿದ್ದಾರೆ. ಮಂತ್ರಾಕ್ಷತೆ ಎರಚಿದರೆ ನೆಲಕ್ಕೆ ಒಂದು ಕಾಳೂ ಬೀಳುವಂತಿಲ್ಲ. ಹಾಗಿದೆ ಜನರ ಗುಂಪು. ನೆಹ್ರೂ ಬಂದಾಗಲೂ ಇಷ್ಟು ಜನಸಂದಣಿ ಒತ್ತಡವಾಗಿ ಸೇರುವುದಿಲ್ಲ.

"ನರಸಿಂಹಾಚಾರ್ಯರು ಬಂದರು ಕಣೋ!" ಈ ಸುದ್ದಿ ಯುವಕರಲ್ಲೆಲ್ಲಾ ಹರಡಿತು. ಹಿಂದೊಮ್ಮೆ ಕೃಷ್ಣ ಪರಮಾತ್ಮನನ್ನು ಹೊತ್ತುಕೊಂಡು ವಸುದೇವ ಹೊರಟಾಗ ಯಮುನೆ ಸೀಳೊಡೆದು ದಾರಿಬಿಟ್ಟಳಂತೆ. ಈ ಯುವಕ ಸಂದಣಿಯಾದರೋ ಅದೇರೀತಿ ಸೀಳುದಾರಿ ಬಿಟ್ಟು ಆಚಾರ್ಯರು ದೇವರ ಮಂಟಪದ ಹತ್ತಿರ ಹೋಗಲು ಎಡೆಮಾಡಿಕೊಟ್ಟಿತು. ಕೀರ್ತಿವಂತರಾದ ಆಚಾರ್ಯರನ್ನು ಮುಟ್ಟಿದರೆ ಅಪರಾಧವೇನೋ ಎನ್ನುವ ಭಯದಿಂದ, ಗೌರವದಿಂದ ಆ ರೀತಿ ಮಾಡಿತು.

ಆಗಿನ ಕಾಲದಲ್ಲಿ ಕೀರ್ತಿ ಶನಿಕಾಟವಲ್ಲ, ಶುಕ್ರಮಾರ್ಕನ ದೆಶೆಯಾಗಿತ್ತು.

ದಿವಾನರು ಬರುತ್ತಾರೆ ಅಂದರೆ ಬಾಳೆಕಂಬ ಕೂಡ ಕಟ್ಟಿದ್ದರೂ ಥರಥರ ನಡುಗುತ್ತಿತ್ತು. ಮಹಾರಾಜರು ಬಂದಾಗ ಬಾಳೆಕಂಬದಲ್ಲಿದ್ದ ಹಸಿರು ಬಾಳೆಗೊನೆ ಎರಡೇ ನಿಮಿಷದಲ್ಲಿ ಹಣ್ಣಾಗಿ ಹೋಯ್ತು. ಮಹಾರಾಜರು ಹಿಂತಿರುಗಿದಮೇಲೆ ಅಲ್ಲಿದ್ದ ನಾವೆಲ್ಲಾ ಆ ಹಣ್ಣನ್ನು ತಿಂದಿದ್ದೇವೆ ಅಂತ ನಮ್ಮ ಹಿರಿಯರು ಹೇಳುತ್ತಿದ್ದರು.

ಈಗ ಶಾಸ್ತ್ರಿಗಳು ಹೇಳಿದ್ದು ಅಕ್ಷರಶಃ ಸತ್ಯ! ಶನಿಕಾಟವೇ ಕೀರ್ತಿಪಡೆದವನಿಗೆ.

ಶಾಲೆಯ ಹತ್ತಿರ ಕೀರ್ತಿವಂತ ಸಿಕ್ಕಿಬಿದ್ದರೆ ದುಂಬಿಗಳು ಭೋರ್ಗರೆಯುತ್ತ ಬರುವಂತೆ ಶಾಲಾ ಬಾಲಕರು ಮುತ್ತುತ್ತಾರೆ. "ಇದರಲ್ಲಿ ಸಹಿಹಾಕಿ, ಸಂದೇಶ ಕೊಡಿ. ಆಶೀರ್ವಚನ ಬರೆದುಕೊಡಿ" ಇತ್ಯಾದಿ.

ಮನೆಬಿಟ್ಟು ಹೊರಗೆ ಬಾರದಿದ್ದರೆ ಆಯಿತು ಅಂತ ಕುವೆಂಪುರವರಂತೆ ಏಕಾಂತ ತಪಸ್ಸನಾಚರಿಸಿದರೆ ಈ ಕಾಟ ತಪ್ಪಬಹುದು ಅಂತ ನೀವೆನ್ನಬಹುದು.

ಉಹ್ಲೂ! ಅದೂ ಸಾಧ್ಯವಿಲ್ಲ.

ಈ ರೀತಿ ಆಗಿರದೇ ಇರಬಹುದು, ಆದರೂ ಇನ್ನುಮೇಲೆ ಆಗದೇ ಇರುವುದಿಲ್ಲ.

"ಶ್ರೀರಾಮನ ಆತ್ಮ–ಗುರುಹಿರಿಯರ ಆತ್ಮ–ನನ್ನ ಆತ್ಮ ಎಲ್ಲವೂ ಪರಮಾತ್ಮನ ಕಣಗಳು ಎಂದು ನಾನು ವ್ಯಾಸಂಗ ಮಾಡಿದುದೆಲ್ಲವೂ ತಿಳಿಸುತ್ತದೆ. ಅಂತ ರಾತ್ಮನು ಕೂಡ ಅದೇ ಸತ್ಯ ಎಂದು ಕಿರುದನಿಯಲ್ಲಿ ಹೇಳುತ್ತಿದಾನೆ. ಆದರೆ ಇದು ಕೇಳಿಸುತ್ತಿದೆಯೇ ಹೊರತು ಅನುಭವಕ್ಕೆ ಬಂದಿಲ್ಲ. ಪರಮಹಂಸರಿಗಾದ ಅನುಭವ ನನಗೂ ಬರಬೇಕಾದರೆ ಇದೇರೀತಿ ಮನನ ಮಾಡಲೇ?"

ಇತ್ಯಾದಿ ಇತ್ಯಾದಿ ನಮಗರ್ಥವಾಗದ ಭಾವನಾ ಪರವಶರಾಗಿದ್ದಾರೆ ಕುವೆಂಪು ಅನ್ನಿ. ಬೆಳಿಗ್ಗೆ ಎಂಟರ ಸಮಯ ಅನ್ನಿ.

ಯಾರೋ ಒಬ್ಬ ಆಗಂತುಕ ಬಾಗಿಲು ತಟ್ಟುತ್ತಾನೆ. ಯಾವ ವಿದ್ಯಾರ್ಥಿಯೋ ಜ್ಞಾನಯಾಚನೆಗಾಗಿ ಬಂದಿದ್ದಾನೆ. ಅಂತ ಕುವೆಂಪು ಅವನನ್ನು ಒಳಗೆ ಕರೆದು ಕೂರಿಸುತ್ತಾರೆ. ಆತ ಬಂದವನೇ ನಮೋ ನಮಃ ಮಾಡುತ್ತಾನೆ ನಿಮ್ಮ ಸಂದರ್ಶ ನಕ್ಕೆ ಬಂದೆ, ರಾಮಾಯಣ ದರ್ಶನ ನನ್ನಂತಹ ಪಾಮರರಿಗಲ್ಲ ನಿಮ್ಮ ದರ್ಶನವೇ ಸಾಕು ಅನ್ನುತ್ತಾನೆ.

"ಎಲಾ! ಇವನ. ನೋಡುಕ್ಕೇನೋ ವಿಮಾ ಏಜಂಟನ ಕಳೆ ಇದೆ ಇವನ ಮುಖದಲ್ಲಿ. ಎದೇನ ಎಕ್ಸ್‌ರೇ ಮಾಡಿದರೂ ಎರಡಕ್ಷರ ಕಾಣಿಸುವಂತಿಲ್ಲ. ಮುಖ ದಲ್ಲಿ ಶೂನ್ಯದ ಕಂಪು ಹೊಡೆಯುತ್ತಿದೆ ಇಂತಹವನು ನನ್ನ ಪುಸ್ತಕದ ಹೆಸರನ್ನು ಕೇಳಿದ್ದಾನಲ್ಲಾ! ಇದೇ ಅಲ್ಲವೇ ದೇವರ ಮಾಯೆ" ಎಂದು ಸಂತಸಗೊಂಡ ಕುವೆಂಪು ಅವನಿಗೆ ಎರಡು ಬಾಳೆಹಣ್ಣು ಒಂದು ಬಟ್ಟಲು ಹಾಲು, ಕೊಟ್ಟು ಆದರಿಸು ತ್ತಾರೆ. ತಾವೂ ಒಂದು ಬಾಳೆಯ ಹಣ್ಣನ್ನು ತಿನ್ನುತ್ತಾರೆ

ಕನ್ನಡದ ಏಳಿಗೆಗೆ ಕನ್ನಡಿಗರನ್ನು ಹೇಗೆ ಉದ್ರೇಕಿಸಬೇಕು ಕನ್ನಡ ಸಂಸ್ಕೃತಿಯ ಹಿರಿಮೆ, ಕನ್ನಡದ ನವೋದಯದ ಮುನ್ಸೂಚನೆಗಳು ಇತ್ಯಾದಿ ಹತ್ತುನಿಮಿಷ ಮಾತುಕತೆಯಾದ ನಂತರ ಆಗಂತುಕ ಹೊರಬೀಳುತ್ತಾನೆ, ನಮಸ್ಕರಿಸಿ.

ಮೂರನೆಯದಿನ ಎರಡು ಹಾಳೆಯ ಪತ್ರಿಕೆಯು ಕುವೆಂಪು ಅವರ ಕೈಸೇರುತ್ತದೆ. "ಹಗಲು ಸಂದರ್ಶನಗಳು" ಶಿರೋನಾಮೆಯಲ್ಲಿ ಆರನೆಯ ಲೇಖನ ಕುವೆಂಪು ಅವರ ಸಂದರ್ಶನ ಕುವೆಂಪು ಅವರನ್ನು ಸಂದರ್ಶಿಸಿದಾಗ ಅವರ ಕಾಲಿನಲ್ಲಿ ಚಪ್ಪಲಿ ಇರಲಿಲ್ಲ. ಬಹುಶಃ ಭರತ ಹೊಡೆದುಕೊಂಡು ಹೋಗಿದ್ದ ಅಂತ ಕಾಣುತ್ತೆ. ಅವರ ಜುಬ್ಬದಲ್ಲಿ ಒಂದು ಗುಂಡಿ ಅರ್ಧ ಒಡೆದಿತ್ತು. ಅಂದಮೇಲೆ ಅಗಸನಿಗೂ ತನ್ನ ಪೂಜ್ಯ ಗೋತ್ರಸ್ಥನ ಅಪರಾಧ ನೆನಪಿಗೆ ಬಂದು, ಅದಕ್ಕೆ ಪ್ರಾಯಶ್ಚಿತ್ತವೊ ಎಂಬಂತೆ ಗುಂಡಿಗಳನ್ನು ಒಡೆಯದಂತೆ ಬಟ್ಟೆ ಒಗೆದಿದ್ದ. ಆದರೂ ಕಸುಬಿಗೆ ಮೋಸ ಆಗಬಾರದೆಂದು ಅರ್ಧ ಗುಂಡಿ ಒಡೆದಿದ್ದ ಅಂತ ತೋರುತ್ತದೆ.

ಕುವೆಂಪು ಬಾಳೆಯ ಹಣ್ಣನ್ನು ತಿನ್ನುವುದೇ ಚೆನ್ನ. ಶಬರಿಯೇ ತಂದು ಕೊಟ್ಟಿದ್ದಾಳೆ ಈ ಹಣ್ಣನ್ನು ಎನ್ನುವ ಭಾವನೆಯಿಂದ, ಹಣ್ಣಿನ ಚರ್ಮ ಸುಲಿದರೆ ಅದು ಎಲ್ಲಿ ನೊಂದುಕೊಳ್ಳುತ್ತೋ ಅಂತ ಮೆಲ್ಲನೆ ಮಕ್ಕಳ ಬನಿಯನನ್ನು ಅಮ್ಮಾ ಬಿಚ್ಚುವಂತೆ ಬಿಚ್ಚುತ್ತಾರೆ. ಹಣ್ಣನ್ನು ತಿನ್ನುವುದಾದರೂ ಹ್ಯೆರ್ ಪರ್ಚೇಸಿನಂತೆಯೇ ತಿಂಗಳಿಗೊಂದು ತುಣುಕು ಎನ್ನುವಂತೆ ಪುಟ್ಟ ಬಾಳೆಹಣ್ಣನ್ನು ಹತ್ತು ನಿಮಿಷ ತಿನ್ನುತ್ತಾರೆ. ನಾನು ಆ ವೇಳೆಗೆ ಎರಡು ಹಣ್ಣನ್ನು ಎರಡೇ ಗುಳುಕಿಗೆ ಮುಗಿಸಿದ್ದೆ. ತುಣುಕು ತುಣುಕಿನ ರಸಾಸ್ವಾದನ ಮಾಡಿಯೇ ಮುಗಿಸುತ್ತಾರೆ. ರಸ ಋಷಿ ಅಂದರೆ ಈಗರ್ಥವಾಯಿತು.

ಸಂದರ್ಶನ ಕ್ಷೇಮಕಾರಿಯಾಗಿತ್ತು. (ಕೊ. ಸ್ವಂ. ಬಾ.)

* * *

ಲೇಖನ ಓದಿದ ಕುವೆಂಪುವಿಗೆ ಓಂಶಾಂತಿ ಶ್ಯಾಂತಿ "ಶ್ಯಾಂತಿಃ" ದೊರೆಯಬೇಕಾದೀತೇನೋ.

ಏಕೆಹೇಳುಕ್ಕೆ ಬಂದೆ ಅಂದರೆ ಕೀರ್ತಿವಂತನಾದರೆ ಈಗಿನ ಕಾಲದಲ್ಲಿ, ಸ್ವತಂತ್ರ ಯುಗದಲ್ಲಿ, ಜನಸಾಮಾನ್ಯದ ದಿನಗಳಲ್ಲಿ, ತನ್ನಪಾಡಿಗೆ ತಾನು ತನ್ನ ಅಭ್ಯಾಸಗಳನ್ನು ಮುಂದುವರಿಸಲೂ ಸಾಧ್ಯವಿಲ್ಲದೇ ಹೋಗಬಹುದೇನೋ!

ಕೀರ್ತಿ—ಶನಿಕಾಟವೇ ಸರಿ.

ಕುಮಾರ.

— o —

ವೈದ್ಯರಲ್ಲಿ ವಿಷನಿಮಿಷಗಳು : (೧)

"ನೋಡೀ ಡಾಕ್ಟ್ರೆ—ನನ್ನಾಕೆ ಮನಸ್ಸಿನಲ್ಲಿ ನನ್ನ ಕಣ್ಣು ಈ ನಡುವೆ ಮಂದ ಆಗ್ತಾ ಇವೆ ಅಂತ ನೀವೇ ಹೇಳಿ—ನಾನೇನಾದ್ರೂ ಕನ್ನಡಕ ಕೊಂಡ್ಕೊಬೇಕೆನೊ?"

ಡಾಕ್ಟ್ರು:—"ಎಲ್ಲಿ—ಈ ಕಡೆ ತಿರುಗಿ ನೋಡೋಣ"

ನೀವು ಸಧ್ಯಕ್ಕೆ ಮಾತಾಡಿಸ್ತಿರೋದು ಗೂಟಕ್ಕೆ ನೇತುಹಾಕಿರೋ ನನ್ನಂಗೀನ!

— "ಕೇಫ"

ಆರ್ತನಾದ

ಎನಿತು ದಿನ ಅವಳ ನಾನೆದುರು ನೋಡಲಿ?—ನ
ನ್ನರಸಿಗಾಗಿ ಅರಸಿ ಒರಲಿ, ನಾಡ ನಾಡಲಿ?

ವಯಸು ತುಂಬಿತಾದರೂ ಶಿವನ ಶಿಲೆಯ ಗೂಳಿಯಂತೆ,
ಅವರಿವರ ಮದುವೆ ಓಲೆ ಓದಿ ಓದಿ ಹರಿಯುತ,
ಗೂಡಿಲ್ಲದ ಗುಬ್ಬಿ ನಾನು; ಹೋಟಲೂಟ ಗಬಕುತ,
ಮದುವೆಗಾಗಿ ಅಲೆದು ಅಲೆದು ನರಳುತಿರುವೆನು.

ಕೆಂಪು ಹೂ ಸಾಲ್ಮರಗಳೆಲ್ಲ ಲಾಲ್‌ಬಾಗಿನಲಿ
ಹಿಗ್ಗಿ ಮಂದ ಗಾಳಿಯನು ಕಳಿಸುತಿರುವುವು;
ಬುರುಡೆ ಪ್ರೇಮದಿಂದ ಉಕ್ಕಿ, ಕಿವಿಗಳರಳೆ ಉಲಿವ ಹಕ್ಕಿ!
ಅವಳ ಜೊತೆಗೆ ವಾಕಿ ಟಾಕಿ—ಎಂದೊ? ಎನುತಿದೆ.

ಜೊತೆಯ ಗೆಳೆಯರೆಲ್ಲರಿಗು ಸತಿಯು ಗಡಣ ಲಭಿಸಿದೆ;
ಘಡಿಯು ನನಗೆ ಮಾತ್ರ ಇನ್ನು ಮಾವನಿಲ್ಲವೆ?
ಯಾವ ತೋಳ ತೆಕ್ಕೆಯಿಂದ ನನ್ನ ತೋಳ ಪುಳಕವೊ?
ಬರಡು ಬಾಳ ತಾಳಲಾರೆ, ಬೇಕು ಮಡದಿ ಬೇಗನೆ.

—ಪಾಟಾಳಿ.

ಕನಿಷ್ಠ ೫೦ ರೂಪಾಯಿ ಸಂಬಳ – ಪರಮಾವಧಿ ೧೦೦೦ ರೂಪಾಯಿ ಸಂಬಳ ಇರಬೇಕೆಂದು ನಿರ್ಣಯದ ನೋಟೀಸ್ ಬಂದಿದೆಯಂತೆ, ಹಲವು ಸದಸ್ಯರಿಂದ ಅಸೆಂಬ್ಲಿಯಲ್ಲಿ.

—ಇದಕ್ಕೆ ತೋಟಿ, ತಳವಾರ, ಪೂಜಾರಿ, ಪಿಂಜಾರಿ, ಮತ್ತಿತರ ಬಹುಸಂಖ್ಯಾತರ ಬೆಂಬಲವಿದೆಯಂತೆ.

ಐ.ಪಿ.ಎಸ್; ಐ ಎ ಎಸ್; ಐ.ಎಫ್.ಎಸ್; ಐ.ಇ.ಎಸ್; ಮುಂತಾದ ಐ ... ಎಸ್ ಅಲ್ಪಸಂಖ್ಯಾತರ ನಿರೋಧವೂ ಬಹಳವಾಗಿದೆಯಾದರೂ ಇವರುಗಳಲ್ಲಿ ಪ್ರಗತಿಗಾಮಿಗಳು ಹಲವರು ಸರ್ಕಾರ ಅಷ್ಟೇ ಸಂಬಳ ಕೊಟ್ಟರೂ ಆಯಿತು ಕೊಡೋ ದೇವರು ಕಣ್ಣುಬಿಟ್ಟರೆ ಸಾಕು – ಎಂದು ಹೇಳಿದ್ದು ಬರೀ ಬುರುಡೆಯಂತೆ.

* * *

ಉಪದೇಶವಿಂಶತಿ

೧. ಇತರರು ನಿಮಗೆ ಏನು ಮಾಡಬೇಕು ಎಂದು ನೀವು ಆಶಿಸುತ್ತಿದೀರೋ ಅದನ್ನು, ಅವರಿಗೆ ನೀವೆ, ಅವರಿಗೆ ಮುಂಚೆಯೇ, ಮಾಡಿ ಹಾಗೆ ಮಾಡಿದರೆ, ಆ ಸೂಚನೆಯನ್ನರಿತು, ಅವರು ಅದೇಪ್ರಕಾರ ನಿಮಗೂ ಮಾಡುವ ಸಂಭವ ಹೆಚ್ಚು. ಅನೇಕವೇಳೆ, ನೀವು ಮಾಡಿದುದಕ್ಕಿಂತ ಚೆನ್ನಾಗಿಯೇ ಅವರು ನಿಮಗೆ ಮಾಡಿ ನಿಮ್ಮನ್ನು ಸಂತೋಷಪಡಿಸಬಹುದು

೨. ಯಾರೊಂದಿಗೆ ವಾದಮಾಡಿದರೂ, ಕಡೆಯ ಮಾತು ಆತನದೇ ಆಗಿರಲಿ, ಒಳ್ಳೆಯವನು ಎಂದೆನಿಸಿಕೊಳ್ಳಲು ಇದೇ ಸರಿಯಾದ ಉಪಾಯ.

೩. ನಿಮ್ಮ 'ಸಾಹೇಬರು' ಯಾವುದಾದರೂ ಹಾಸ್ಯದ ತುಣಕನ್ನು ಪ್ರಯೋಗಮಾಡಿದರೆ, ಉಳಿದವರೆಲ್ಲರೂ ನಕ್ಕು ಮುಗಿಸಿದ ಮೇಲೂ, ನೀವು ನಗುತ್ತಿರಬೇಕು. ಅವರ ಅಚಲ ಪ್ರೀತಿಯನ್ನು ಗಳಿಸಲು ಇದೇ ಮಾರ್ಗ.

೪. ಅನ್ಯರು ನಮಗೆ ಮಾಡುವ ಅಪಕಾರಗಳಿಗಾಗಿ ಅವರನ್ನು ಕ್ಷಮಿಸುವುದು ದುಸ್ಸಾಧ್ಯ; ಆದ್ದರಿಂದ, ಅವುಗಳನ್ನು ಮರೆತುಬಿಡುವುದೇ ಕ್ಷೇಮ.

೫. ಹೆಚ್ಚಾಗಿ ವಾಗ್ದಾನಮಾಡಿ; ನೀವು ಕೊಟ್ಟ ವಚನದಂತೆ ನಡೆಯುತ್ತೀರೋ ಇಲ್ಲವೋ, ಎಂದು ತಾಳೆ ಹಾಕಿ ನೋಡುವ ಪುರಸತ್ತೂ ತಾಳ್ಮೆಯೂ ಅನೇಕರಿಗಿರುವುದಿಲ್ಲ.

೬. ನೀವೇನಾದರೂ ತಪ್ಪು ಮಾಡಿದರೆ, ಅದನ್ನು ಬೆಪ್ಪನಂತೆ ಒಪ್ಪಿಕೊಳ್ಳಬೇಡಿ; ಏಕೆಂದರೆ, ಅದನ್ನು ತಪ್ಪೆಂದು ತಿಳಿಯಬಲ್ಲವರು ಕಡಮೆ; ಅಲ್ಲದೆ, ಅಂಥವರು ಅದಕ್ಕಿಂತ ದೊಡ್ಡ ತಪ್ಪನ್ನು ತಾವೇ ಮಾಡಿರುತ್ತಾರೆ.

೭. ನಿಮ್ಮಲ್ಲಿರುವ ಸುಗುಣಗಳನ್ನು ನೀವೇ ಎತ್ತಿ ಆಡಬೇಡಿ; ಹಾಗೆ ಮಾಡುವುದು ಸುಗುಣಗಳ ದುರ್ಗುಣ.

೮. ನಿಮ್ಮ ಹೃದಯ ವಿಶಾಲವಾಗಿರಲಿ, ಆದರೆ, ಹೃದಯಕ್ಕಿಂತ ತಲೆಯೇ ಮುಖ್ಯ ಎಂಬುದನ್ನು ಮರೆಯದಿರಿ. ಹೃದಯ ವೈಶಾಲ್ಯತೆಯ ಅವಶ್ಯಕತೆಯನ್ನು ಕುರಿತು, ಇತರರಿಗೆ ಬೋಧಿಸಿ.

೯. ನೀವು ತೆಗೆದುಕೊಂಡಿರುವ ಸಾಲದ ವಿಷಯವನ್ನೆಲ್ಲ ನೀವು ಮರೆತುಬಿಡಿ; ಅದನ್ನು ಕುರಿತು, ಕೊಟ್ಟವರು ನಿಮಗೆ ನೆನಪು ಕೊಡಲಿ—ಅದರ ವಸೂಲಿಗಾಗಿ ಅವರೇ ಪೇಚಾಡಲಿ.

೧೦. ವಾಚಾಳಿಗಳನ್ನು ಎದುರು ಹಾಕಿಕೊಳ್ಳಬೇಡಿ; ಅವರೇ ನಾಳಿನ ಮಂತ್ರಿಗಳು.

೧೧. ಅವಿದ್ಯಾವಂತರ ನಂಬಿಕೆಗಳನ್ನು ಟೀಕಿಸಿ, ಅವೆಲ್ಲ ಸುಳ್ಳು ಎಂದು ಅವರಿಗೆ ಬೋಧಿಸಬೇಡಿ; ಅವರು ನಿಮ್ಮನ್ನೇ ಸುಳ್ಳು ಎಂದು ದೂರುತ್ತಾರೆ.

೧೨. ಯಾರನ್ನೂ "ದಡ್ಡ" ಎಂದು ಬೈಯಬೇಡಿ; ದಡ್ಡತನ ಅನೇಕವೇಳೆ ಪೂರ್ಣಜ್ಞಾನದ ಪಕ್ವ ಫಲವಾಗಿರಬಹುದು.

೧೩. ದೊಡ್ಡವರು ಯಾರಾದರೂ ನಿಮ್ಮನ್ನು ಯಾವುದಾದರೂ ಕೆಲಸಮಾಡಿ ರೆಂದು ಆಜ್ಞಾಪಿಸಿದರೆ, ಒಪ್ಪಿಕೊಳ್ಳಿ ಅನಂತರ, ಅದನ್ನು ಮಾಡದೆ ಇರಲು ನೆಪ ಹುಡುಕಿ.

೧೪. ಇತರ ಮಹಿಳೆಯರನ್ನು ನಿಮ್ಮ ಪತ್ನಿ ಎದುರು ಹೊಗಳಬೇಡಿ; ತೆಗಳಿ ದರೂ ತಪ್ಪು. ಏಕೆಂದರೆ, ಪರಸ್ತ್ರೀ ವಿಷಯದಲ್ಲಿ ನಿಮಗೆ ಆಸಕ್ತಿ ಹೆಚ್ಚು ಎಂದು ಆಕೆ ಪತ್ತೆ ಹಚ್ಚಿಬಿಡುತ್ತಾಳೆ.

೧೫. ರಸ್ತೆಯ ಎಡಪಕ್ಕದಲ್ಲೇ ಇತರರೆಲ್ಲ ಹೋಗಲಿ; ನೀವು ಮಾತ್ರ ಬಲಪಕ್ಕದಲ್ಲೆ ಹೋಗಿ....ದಾರಿಯಲ್ಲಿ ಸಿಗುವ ವ್ಯಕ್ತಿಗಳನ್ನು ಮುಖಾಮುಖಿ ಪರೀಕ್ಷಿ ಸಲು ಇದೇ ಸರಿಯಾದ ಮಾರ್ಗ.

೧೬. ನಿಮ್ಮ ಮಗ ತಪ್ಪಿಸಿಕೊಂಡಿದಾನೆ; ಅವನನ್ನು ಪತ್ತೆ ಹಚ್ಚಿದವರಿಗೆ ಬಹುಮಾನ, ಎಂದು ಪತ್ರಿಕೆಗಳಲ್ಲಿ ಜಾಹಿರಾತು ಹಾಕಬೇಡಿ; ಅವನು ಸ್ಕಾಲರ್ಷಿಪ್ ಪಡೆದು ಅಮೇರಿಕಾಗೆ ಹೋಗಿರುತ್ತಾನೆ; ಹೀಗಾಗುವ ಸಂಭವವೇ ಹೆಚ್ಚು.

೧೭ ಎಂಟು ರೂಪಾಯಿಬೆಲೆ ಹೇಳುವ ಸಾಮಾನಿಗೆ ಎರಡು ರೂಪಾಯಿ ಕೊಡುತ್ತೇನೆ, ಎಂದು ನೀವು ಹೇಳಬೇಡಿ....ಆತ, ಅದನ್ನು ಎಂಟಾಣೆಗೇ ಕೊಡ ಬಹುದು.

೧೮ 'ಹಲ್ಲುನೋವಿಗೆ ನಾನು ನನ್ನ ಹೆಂಡತಿ ಕೈಯಲ್ಲಿ ದವಡೆ ಔಷಧಿ ಹಚ್ಚಿಸಿ ಕೊಳ್ಳುತ್ತಿದೇನೆ', ಎಂದು ಸ್ನೇಹಿತನ ಹತ್ತಿರ ಹೇಳಬೇಡಿ; ಆತ, ತನಗೆ ಹಲ್ಲು ನೋವು ಬಂದಾಗ, ನಿಮ್ಮ ಮನೆಗೆ ನುಗ್ಗಬಹುದು.

೧೯. ಒಂದೊಂದು ಕ್ಯಾಲಂಡರ್ ಸಂಗಡಲೂ ಒಂದೊಂದು ಮೂಳೆಯನ್ನು ಎರಡು ಚದುರಡಿ ಗೋಡೆಯನ್ನು ಕೊಡದವರಿಂದ, ನೀವು ಎಂದೂ ಉಚಿತವಾಗಿ ಕ್ಯಾಲಂಡರ್ ಸ್ವೀಕರಿಸಬೇಡಿ.

೨೦. "ದೂರದ ನಂಟ" ಎಂದು ಹೇಳಬಹುದಾದ ವ್ಯಕ್ತಿಯೇ ಇಲ್ಲ ಎಂಬು ದನ್ನು ನೆನಪಿಸಲ್ಲಿಡಿ. ನೀವು ಶ್ರೀಮಂತರಾದರೆ, ಅವರೆಲ್ಲರೂ ಹತ್ತಿರದ ನಂಟರು; ನೀವು ಬಡವರಾದರೆ, ಅವರೆಲ್ಲರೂ ದೂರದ ಯಾರೋ.

—ಸೋಮನಾಥ.

—o—

ಪಾಸು-ನಪಾಸು

(ಮತ್ತೊಂದು ದೋಣಿ ಹಾಡು)

ದೋಣಿ ಸಾಗಲಿ, ಮುಳುಗುತೇಳಲಿ, ಮತ್ತೆ ಕಾಲೇಜ ಸೇರಲಿ!
ಈಸು ಮಾರ್ಕಿಗೆ ಬೋಳು ಬೀಳುವ ವಿಧಿಯು ಮೇಗಡೆ ಹಾರಲಿ!

ಪೆನ್ನ ಸೊಂಟವ ಹಿಡಿದು ಕೈಯೊಳು, ಕರಿಯ ಇಂಕನು ಚಿಮುಕಿಸಿ
ಪೇಪರಾಳಿಯ ಬಣ್ಣ ಕೆಡಿಸುತ ಪಾಪರೆನಿಸುತ ಮೆದುಳಲಿ
ನೋಡಿ, ಹುಡುಗರ ದುಃಖತಂಡದಿ ಪಾಸೆ ಆಗದ ಕಂಬನಿ!
ಒರಸಿ ತಕ್ಷಣ! ಜಾಣರವರಿಗೆ ನಾಳೆ ಜಯವನು ಬಯಸಿರಿ!

ಎರವ ಲಂಗಿಯ ಮೇಲೆ ಹುಡ್ಡು, ಪದಕ ಹೊತ್ತಾ ಎದೆಯಲಿ
ಮೆರಸಿ ಕುಣಿವರು ನಾಳೆ, ಅಲ್ಲಿ, ಕಾನ್‌ವೊಕೇಷನ ಬಂಗಲಿ!
ಕೆಸರು ತುಳಿದಾ ಹೊಲಸು ಕಾಲನು ತೊಳೆದು ಕಾಲೆಜಿನೊಳಗಡೆ
ಅದನೆ ತಿನ್ನುವೆ ಎನುತ ಮತ್ತೆ ಹಳೆಯ ಬೆಂಚಲಿ ಕೂರುವ

ದೂರ ಬೆಟ್ಟದ ಮೇಲೆ ನುಣ್ಣಗೆ ಡಿಗ್ರಿ ಇರುವುದ ನೋಡಿರಿ!
ಅದನೆ ಬಯಸುತ, ಹಾಳೆ ತಿರುವುತ, ಓದುವಾಟವ ನಾಡಿರಿ!
ನಾವು ಲೀಲಾ ಲೋಲ ಹುಡುಗರು, ನಮ್ಮ ಜೀವನ ಓರಿಗೆ—
ಪಾಸು ಪಾಸಿಗೆ, ಫೇಲು ಫೇಲಿಗೆ–ನಾವೆ ನಾಡಿನ ಬೋದಿಗೆ.

—ಕಾಮತ್.

ಹೊಸ ಸರ್ವಜ್ಞ

ಕುಲವೆಲ್ಲ ಕೆಟ್ಟ ಕಥೆ, ಹೊಲಸು ಕೊಲೆಯೊ ಕಗ್ಗ
ಸೂಳೆಯನು ಕುರಿತ ಕಥೆ—ಗೂಳಿಗಳ
ಹುಳು ತಿರುಗಾಟ ಬರೆಸುವುದು, ಕೂಳು ಕಣಯ್ಯ, ಸರ್ವಜ್ಞ.

ಎತ್ತ ಹೋದರು ಬೆನ್ನ ಹತ್ತಿ ಹೋಹನ ಕಂಡು
ಬಸವನಾ ಬಾಲ, ಎನಬೇಡ; ಅವ ತುಂಬ
ಜಗವರಿತ ಜಾಣನೇ ಅಕ್ಕು, ಸರ್ವಜ್ಞ.

ನಂಬಿಕೆಯ ಕೊಟ್ಟರೂ, ನಂಬದಿರು ಮಂತ್ರಿಯನು
ನಂಬಿಸುತ ಲೊಬ್ಬನನು, ಮತ್ತೊಬ್ಬ
ಗಿಂಬು ಮಾಡುವುದೆ ತಂತ್ರ, ಸರ್ವಜ್ಞ

ಮೆಚ್ಚಿದಂತಿರು ತಿಹರು, ಮೆಚ್ಚು ಮತ್ತೊಬ್ಬನೊಳು!
ಮೆಚ್ಚಿಹರು ವೋಟಳಿನ ಬೇಡ, ಅವಳಿನೀ
ಹುಚ್ಚರೆಂದೆನಿಸುತಿರು, ಸರ್ವಜ್ಞ.

ಡಾ|| ದಾಮೋದರ್

"ಭಾರ್ಯಾ ರೂಪವತಿ...."

ತುಂಗಮ್ಮ ತುಟಿಕಚ್ಚಿ ಕಣ್ಣು ಕೆಂಚಗೆಮಾಡಿದ್ದು ಬೆಂಗಳೂರಿನ ತಮ್ಮ ಮನೆ ಮುಂದೆ ನಿಂತಾಗ. ಕಣ್ಣು ಕುಕ್ಕುವಂತೆ ಥಾಳವಾಗಿ ಕಾಣಿಸುತ್ತಿತ್ತು ಅಚ್ಚಕನ್ನಡದಲ್ಲಿ ಬರೆದ ಬೋರ್ಡು, "ಇಲ್ಲಿ ಮೂಕರ್ಜಿ ವಗ್ಯೆರೆ ಬರೆಯಲ್ಪಡುತ್ತವೆ—ವಕೀಲ್ ವಿಠ್ಠಲ ರಾಯ". ಸುಂದರಮ್ಮ ಸುಸ್ತಾದಳು. ನಾಗವೇಣಿ ನಾಲಿಗೆ ಹಾಯಿಸಿದಳು. ಡಾ|| ದಾಮು ಮಾತ್ರ ತನ್ನ ಮನೆಗೆ ತಾನೇ ಪರಕೀಯನಂತೆ ಹೊಕ್ಕ.

ಮುಂಬಾಗಿಲು ಹೊಸಿಲಬಳಿ ನಿಂತಾಗ ಒಳಗಿನಿಂದ ಧಾಂಡಿಗನೊಬ್ಬ ಬಂದ. ಬಂದು ಡಾ|| ದಾಮೋದರರನ್ನೂ ಅವರ ಹಿಂದಿದ್ದ ಪರಿವಾರವನ್ನೂ ಕಂಡು ಯಾರೋ ಪಾಪ – ಎಂದೆನ್ನುವ ಧ್ವನಿಯಲ್ಲಿ

"ವಿಠ್ಠಲರಾಯರು ಮನೆಲಿಲ್ಲ ಸ್ವಾಮಿ – ತಾವು ಯಾರು – ತಿಳಿಸಿದರೆ ಬಂದ ತಕ್ಷಣ ತಿಳಿಸ್ತೇನೆ" ಎಂದು ಹೇಳಿದ. ಹಾಗೇ ಜೇಬಿನಿಂದ ಕೋಡುಬಳೆ ತಿಂದ – ಈ ಮಾತು ಹೇಳಿದ್ದೂ – ಮೊದಲೇ ಉಬ್ಬಿದ ಕೆನ್ನೆ ಮತ್ತೂ ಉಬ್ಬಿಸಿಕೊಂಡೆ,

"ನೀನ್ಯಾರಪ್ಪಾ" ಎಂದದ್ದು ಸುಂದರಮ್ಮ.

"ನಾನು ವೆಂಕಟಕೃಷ್ಣ; ವಿಠ್ಠಲರಾಯರ ಹೆಂಡ್ತಿ ತಮ್ಮ...."

"ಓ.... ಬಾರಮ್ಮ ಒಳಗೆ..." ಎಂದು ಹೊಸಲು ದಾಟಿದ ಹುಡುಗ ಡಾ|| ದಾಮು.

ನಡುಮನೆಗೆ ಹೋದಾಗ – ಅಲ್ಲಿ ಕಂಡದ್ದು ಡಾ|| ದಾಮುವಿ ತನ್ನ ಮನೆಯನ್ನಲ್ಲ ವಿಠ್ಠಲರಾಯರ ಮನೆಯನ್ನೇ. ಡಾ|| ದಾಮುವಿನ ಮೇಜಿನಮೇಲೆ ವೈದ್ಯಕೀಯ ಪುಸ್ತಕದ ಬದಲು ವಕೀಲಿ ಗ್ರಂಥಗಳಿದ್ದುವು – ಔಷಧಿ ಬೀರುವಿನಲ್ಲಿ ಕೇಸಿನ ಲಾಯರಿ ಕಂತೆಗಳು ಕುಂತಿದ್ದವು.

ಉಸ್ಸಪ್ಪ ಎಂದು ಕುರ್ಚಿಯಮೇಲೆ ಕುಳಿತ ಕೆಂಗಣ್ಣಿಂದ ಸುತ್ತಲೂ ನೋಡಿದ ತುಂಗಮ್ಮ "ಯಾರೊಳಗೇ" ಎಂದು ಮೇಜು ಕುಟ್ಟಿದರು, ಮನೆಯೇ ಕಲ್ಲೋಲ ಅಲ್ಲೋಲವಾಯಿತು.

ವೆಂಕಟಕೃಷ್ಣ – ಅಗಿಯುವುದನ್ನು ನಿಲ್ಲಿಸಿದ. ಅಡಿಗೆಮನೆಯಿಂದ ರುಕ್ಕು ಬಂದಳು. ಈಚೆ ರೂಮಿನಿಂದ ಇನ್ನೊಬ್ಬ ಬಂದ, ಆಚೆ ರೂಮಿನಿಂದ ರೂಮಿ ಬಂತು.

ರೂಮಿ ವಿಠ್ಠಲರಾಯರ ಪ್ರೀತಿಯ ಅಲ್‌ಸೇಷಿಯನ್ ಕುತ್ತ. ನಾಲಗೆಯನ್ನು ಹೊರಚಾಚಿ ಕಿವಿಯನ್ನು ಕೊಂಚ ಕತ್ತು ಬಾಗಿಸಿ ನೆಟ್ಟದೃಷ್ಟಿಯಿಂದ 'ನೀವ್ಯಾರು?' 'ಇಲ್ಲೇನು ಕೆಲಸ?' ಎಂಬಂತೆ ತುಂಗಮ್ಮನನ್ನು ನೋಡಿತು. ದೊಡ್ಡಮನುಷ್ಯರಂತೆ ದೊಡ್ಡ ಹೊಟ್ಟೆಯ ಬಟ್ಟತಲೆಯ ಹಸಿದ ದೃಷ್ಟಿಯ ಇನ್ನೊಬ್ಬನೂ ಬಂದು ಸೇರಿದ. ದೊಡ್ಡ ಸಂತೆಯೇ ನೆರೆಯಿತು.

ಡಾ|| ದಾಮೋದರರು ತಮ್ಮ ಕೋಣೆಗೆ ಹೋದರು. ಆ ರೂಮು ರುಕ್ಕು ಆವರಿಸಿದ್ದಳು. ತನ್ನ ಫೋಟೊ ಜೊತೆಗೆ ಅವಳದನ್ನೂ ಇರಿಸಿದ್ದಳು ಮೂಲೆ ಮೇಜಿನ ಮೇಲೆ. ಡಾಕ್ಟರು ಬೀರುವಿನಲ್ಲಿನ ಬ್ರಾಂದಿಸೀಸೆ ತೆಗೆದು ಅರ್ಧ ಔನ್ಸ್ ಗ್ಲಾಸಿನಲ್ಲಿ ತುಂಬಿ ಕುಡಿದು ಕೋಟು ಬಿಚ್ಚಿ ಮಂಚದಮೇಲೆ ಉರುಳಿಬಿಟ್ಟರು.

ಇಲ್ಲಿ ಹಾಲಿನಲ್ಲಿ ತುಂಗಮ್ಮ ಸೆರಗು ಅಡ್ಡಕಟ್ಟಿದರು. ಗಂಟಲು ಸರಿಪಡಿಸಿಕೊಂಡರು. ಸುಂದರಮ್ಮನಿಗೆ ಹೇಳಿದಳು "ಸುಂದರೂ – ನಿನ್ನ ಯಜಮಾನರು ಸಂಜೆ ಮೋಟಾರಿಗೇ ಬರುತ್ತಾರಲ್ವೇ"

"ಹೂಂ"

"ನಾಗವೇಣೀ ನೀರುಮನೆಗೆ ಹೋಗಿ ಒಲೆಯಲ್ಲಿ ಬೆಂಕಿಇದ್ದರೆ ಮೊಗಚೆ ಕಾಯಿ ಕಾಯಲಿಕ್ಕೆ ಹಾಕು – ದಾಮು ದಣಿದವ ಮಲಗೇ ಇರಲಿ – ಅಯ್ಯಾ ಬಕರಧ್ವಜ ನಿಮ್ಮಗಳ ಯಜಮಾನ ಯಾರು?" – ಎಂದು ಬಟ್ಟತಲೆಯ ಭೀಮನನ್ನು ಕೇಳಿದಳು.

"ನಮ್ಮ ವಿಠ್ಠಲರಾಯರು"

"ಅವರು ಮನೆಲಿಲ್ಲಾಂತ ಆಗಲೇ ಅರಿಕೆಮಾಡ್ಕೊಂಡೆ" ಎಂದು ತಿಂಡಿಪೋತನ್ ಥಾಂಡಿಗ ಬಿನ್ನವಿಸಿದ.

"ಈ ಮನೆ ಯಾರದ್ದೂಂತ ತಿಳ್ಕೊಂಡಿದ್ದೀರ"

"ರುಕ್ಕು ಭಾವಿಗಂಡಂದೂಂತ"

"ರುಕ್ಕು ಭಾವಿಗಂಡನ ಅಮ್ಮನದೂಂತ ತಿಳಿಯದೇ...."

—ಎಂದಾಗ ನಾಯಿ ಬೌ ಎಂದಿತು. ಅದು ಹಾಗಂದಾಗ ಗೊತ್ತು ವಿಠ್ಠಲರಾಯರು ಗೇಟಿನ ಹತ್ತಿರ ಬಂದರೆಂದು. ಬಂದ ಮಂದಿ ಹಾಗೇ ಹಿಂದೆ ಸರಿದರು. ರೂಮಿ ಅವರನ್ನು ಸ್ವಾಗತಿಸಲು ಓಡಿತು.

"ರುಕ್ಕೂ .... ಡಾಕ್ಟರು ಬಂದರಂತೆ – ಮಾರ್ಕೆಟ್ನಲ್ಲೇ ತಿಳೀತು – ಅವರುಗಳ ಬಸ್ಸಲ್ಲೇ ಬಂದ ನನ್ನ ಕ್ಲೈಯಂಟು ಹೇಳಿದರು...." ಎಂದೆನ್ನುತ್ತಲೇ ಬಂದರು–ಬಂದು ನಿಂದರು, ನಿಂದು ಕಂಡರು, ಕೆಂಗಣ್ಣ ತುಂಗಮ್ಮನನ್ನು. ರುಕ್ಕು ಏನೂ ತೋಚದೆ ಬೆ ಬೆ ಬೆ ಎಂದು ತೊದಲಿದಳು. ಗಟ್ಟಿಯಾದ ಧ್ವನಿಯಲ್ಲಿ ಹೇಳಿದರು,

"ನಮಸ್ಕಾರವಮ್ಮ.... ನಮಸ್ಕಾರ ಬಂದಿರಲ್ಲಾ – ಬಸ್ಸು ಪ್ರಯಾಣ – ಮಡಿ ಉಟ್ಕೊಂಡ್ರಾ—ಲೋ ಬಾಣಸಿಗಾ"

—ಎಂದಾಗ ಒಳಕ್ಕೆ ಓಡಿಹೋದ ಬಟ್ಟೆತಲೆಯ ಬಾಣಸಿಗ ಓಡೋಡಿ ಬಂದ.

"ಏನಪ್ಪಣೆ ಯಜಮಾನ್ರೆ"

"ನೀರೊಲೆಗೆ ಉರಿ ಹಾಕಿದ್ದೀ ಏನೋ – ಅಮ್ಮಾ ಅವರು – ದೊಡ್ಡಮ್ಮಾ ಅವರು ಅವರ ಮನೆಗೇ ಬಂದಾಗ 'ತಾಯೀ ಸ್ನಾನಕ್ಕೇಳಿ – ನೀರು ಕಾದಿದೇಂತ ಬಿನ್ನವಿಸಿಕೊಳ್ಳಬಾರದೇನೋ.... ಅಡಿಗೆ ಏನುಮಾಡಿದ್ದೀಯೋ.... ಮಾಂಸಕ್ಕೆ ಆ ಆಳು ಅಂಜನಿಗೆ ಹೇಳಿದ್ದೆ ಬೇಯಿಸಿದ್ದಾನೆಯೆ?"

—ತುಂಗಮ್ಮನಿಗೆ ಕೆಟ್ಟ ಕಸಿವಿಸಿ ಆಯ್ತು–ಶ್ರೀರಾಮ ಯಾವ ಪಾಪಮಾಡಿದ್ದೆ ನೆಂದು ಈ ವಿಪ್ಪತ್ತು ಎಂದು ವಿಪರೀತ ದುಃಖ ಕೋಪ ಕೂಡಿ ಬಂತು. ಈ ಸೂಕ್ಷ್ಮ ತಿಳಿದ ವಿಠ್ಠಲರಾಯರು ಸಂಶಯ ನಿವಾರಣೆಗೆ ವಿವರ ಕೊಟ್ಟರು.

"ಮಾಂಸ ರೂಮಿಗೆ ಜನಗಳಿಗಿಂತ ನಾಯಿಗಳಿಗೇ ನಿಯತ್ತು ಹೆಚ್ಚು. ವೈರಿಯಾರು ಹಿತಚಿಂತಕರ್ಯಾರು ಒಳ್ಳೆ ಹೆಣ್ಣಾವುದು – ಕೆಟ್ಟ ಹೆಣ್ಣಾವುದು – ಕುಲ ಮನೆತನ. 'ಎಲಾ ಇವ ತನ್ನ ಉಪಕಾರಿಯೋ – ಅಪಕಾರಿಯೋ' ಎನ್ನುವ ವಿವೇಚನೆ ಇರಬೇಕಮ್ಮಾ ಉಸ್ಸಪ್ಪ...." ಎಂದು ಸೋಫದಮೇಲೆ ಕುಳಿತರು.

"ಸುಂದರೀ ನಿನ್ನ ಗಂಡ ಸಂಜೆಗೇನೇ ಬರೋದೂ"

"ಹೂನತ್ತೆ"

"ಬರ್ತಾ ಡಬ್ಬಲ್‌ಬ್ಯಾರಲ್ ಬಂದೂಕು ದಾಮು ತಂದೆ ಉಪಯೋಗಸ್ತಾ ಇದ್ದುದು – ನಾನೂ ಒಂದುಸಲ ನಮ್ಮ ಕರುವಿನ ಕಾಲು ಹಿಡಿದ ನಾಯಿನ್ನ ಢಂ ಅನ್ನಿಸಿರಲಿಲ್ವೇ ಆ ಬಂದೂಕು ತರ್ತಾನೆ ತಾನೇ"

"ಆಂ ...ತರ್ತಾರೇ .... ನನಗೆ ಎತ್ತೋಕೆ ಆಗೊಲ್ಲ ನೀವೇ ತನ್ನೀಂತ ಜ್ಞಾಪಿಸೇ ಇದ್ದೀನಿ"

—ವಿಠ್ಠಲರಾಯರು ಈ ಎದುರುಮೋಡಿ ಎದುರಿಸಲೇಬೇಕಾಯ್ತು.

"ಈಗ ಸರಿಯಾದ ಮದ್ದೆ ಸಿಕ್ಕೋಲ್ಲ – ರೂಮಿ ಜೊತೆ ನಾನೂ ಷಿಕಾರಿಗೆ ಹೋಗಿದ್ದೇನ್ನಿ ಆದರೆ ಮೊನ್ನೆ ಬೇಟೆಯೋ ಬೇಟೆ ತುಂಗಮ್ಮನೋರೇ.ಸಿಂಹ ಬಲೆಗೆ ಬಿದ್ದ ಹಾಗಾಯ್ತು"

—ತುಂಗಮ್ಮ ಬಹು ಸೂಟಿ. ಅವನು ಹೇಳುವ ಬೇಟೆ ಅವನು ಈ ಮಿಗ ರುಕ್ಕುವನ್ನು ಬಲೆ ಒಡ್ಡಿ ದಾಮುವನ್ನು ಕೆಡೆವಿದೆನಲ್ಲಾ ಎನ್ನುವುದೇ ಎಂಬುದನ್ನು ಗ್ರಹಿಸಿದಳು.

"ಆದರೂ ಬೇಟಿ ದಕ್ಕಿತೂನ್ನೋದು ಖಾತ್ರಿಯಾಗಿದೆಯೆ ತಮಗೆ...."

—ಈಗ ಮಾತ್ರ ತುಂಗಮ್ಮ ಬರೀಮಾತಿನ ವರಸೆಗೆ ಆವಳ ಮಗನಂತೆ ಬಗ್ಗುವ ಇಸಮಲ್ಲ ಎಂದು ಖಂಡಿತವಾಯಿತು. ಈ ಸಮಯಕ್ಕೆ ಬಾಣಸಿಗ ಭೀಮ ಹದನಾದ ಪಾವು ಲೋಟದಲ್ಲಿ ಮಿರಿಮಿರಿ ಎನ್ನುವ ಕಾಫಿ ತಂದ, ಎಂದಿನಂತೆ. ಬಾಯಿಗೆ ರುಚಿಸಲಿಲ್ಲ.

"ಬೇಡ ಭೀಮು – ಬಾಯಿಗೆ ಸೇರದು. ಹ್ಯಾಗೆ ಸೇರತ್ತೆ. ಇಬ್ಬರು ಪ್ರೇಮಿಗಳ ಒಂದು ಗಂಡು ಒಂದು ಹೆಣ್ಣು ಜೀವ ಜೊತೆಯಾಗಿರಲು ಹವಣಿಸಿದಾಗ ಬಂದೂಕು ಅಡ್ಡ ಬಂದರೆ ಹ್ಯಾಗೆ ಸೇರುತ್ತೆ ಕಾಫಿ .."

"ಅದು ಸರಿ – ಆ ಹೆಣ್ಣುಜೀವ ತಮ್ಮ ಮಗಳೇ ಆಗಬೇಕೂನ್ನೊ ನಿಮ್ಮ ಶಕುನಿ ಕುಹಕಕ್ಕೆ ಬಂದೂಕು ಬಂದದ್ದು. ಮನೇಲಿ ಬೆಳೆದು ನಿಂತ ಹುಡುಗಿ ಮೊದಲಿಂದೂ ಮಾತುಕಥೆಯಾಗಿದ್ದು – ಎಲ್ಲ ವಿಷಯ ನೀವು ಯಳಂದೂರಿಗೆ ಬಂದಾಗಲೇ ನಾಸ್ತಿ ಅಂದು ಕಳಿಸಿರಲಿಲ್ವೇ ಮತ್ತೇಕೆ ಈ ಹಿತ್ತಲು ಕಡೆಯಿಂದ ಪ್ರವೇಶ?"

"ತುಂಗಮ್ಮನೋರೆ – ನಾನು ಮಾಡ್ತೀನಿನ್ನೊದು ಸುಳ್ಳು – ಎಲ್ಲಾ ಪರಾತ್ಪರ ಸ್ವರೂಪನ ಕಪಟನಾಟಕ. ಔಷಧಿಗೇಂತ ರುಕ್ಕೂನ ಕರ್ಕೊಂಡು ಆಸ್ಪತ್ರೆಗೆ ಹೋದಾಗ ನಾಡಿ ನೋಡೋಕೆ ಹುಡುಗಿ ಕೈಹಿಡಿದ ಡಾಕ್ಟರು ದಾಮೋದರರು ಬಿಡಲಾರೇಂತ ಗಟ್ಟಿಯಾಗಿ ಹಿಡಿದಾಗ ಹೆತ್ತಕರಳು–ನೆಟ್ಟಪ್ರೇಮ–ನೀವೂ ದಾಮು ಹಿತಚಿಂತಕರು– –ನಾನೂ ರುಕ್ಕು ಹಿತಚಿಂತಕ. ಹೀಗಿರೋವಾಗ ಕನುಕೊಂಟನಿ ಯಾಕೆ ಊದಿಸಬಾರದು?"

"ಅದುಸರಿ– ಈ ಮನೆ ನಮ್ಮದೊ ನಿಮ್ಮದೊ?–ಇದು ಭಾವಿಬೀಗರು ಮಾಡುವ ಕೆಲಸವೇ – ನಯ ನೀತಿ ಬೇಡವೆ – ನಮ್ಮ ಹುಡುಗನಿಗೆ ಅಮೀಲ್ದಾರ್ರ ಹೆಣ್ಣು ಘನವಾದ ಸಂಬಂಧ ಹುಡುಗಿ ಮದಗಜವದನೆಯಲ್ಲ ಸುಂದರಿ ಬಂದಿತ್ತು. ಬ್ಯಾಡಾ— ಮನೇಲಿರೊ ಮಹಾಲಕ್ಷ್ಮಿಯಂಥ ನಾಗವೇಣಿ ಇದ್ದಾಳೆಂತ ಬಿಟ್ಟೆ ಈಗ ಹ್ಯಾಗೆ ನಿಮ್ಮ ಮಾತು ಕೇಳೋದು?"

"ಹ ಹ – ವಿಠ್ಠಲಾ – ಪಾಂಡುರಂಗ, ನಾನು, ನೀನು, ನನ್ನಮನೆ, ನಿನ್ನಮನೆ, ಯಾರು ಯಾರಿಗೆ ಪುರಂದರವಿಠ್ಠಲ, ಈ ನಶ್ವರವಾದ ಪ್ರಪಂಚದಲ್ಲಿ ನಾವ್ಯಾರು ನೀವ್ಯಾರು ಎಲ್ಲಾ ಆ ಪರಾತ್ಪರ ಸ್ವರೂಪನ ಪಾದಾರವಿಂದ ಸೇರಿದಮೇಲೆ— ಈ ಹೊನ್ನು ಮಣ್ಣು ಹೆಣ್ಣು ಎಲ್ಲಿ ಹೋಗತ್ತೆ – ಉದಾರ ಮನೋಭಾವ ಬೇಕು"

"ಇದೂ ಉದರ ಮನೋಭಾವ ರಾಯರೇ .... ನಾನು ಹೆಣ್ಣುಹೆಂಗ್ಸು – ಈ ದಾಮೂನ್ನ ಕುನ್ನಿಯಾಗಿದ್ದಾಗಲೆ ಮಡಲಿಗ್ಹಾಕಿ 'ಸಾಕು' ಎಂದು ಸಾಗಿಹೋದರು– ಹೆಚ್ಚಿಗೆ ಹೇಳ್ಬಾರ್ದೆ – ನಮ್ಮ ಸುಂದರಿ ಗಂಡ ಸಂಜೀವ ಸಂಜೆ ಬರ್ತಾನೆ–ಅಷ್ಟುಹೊತ್ತಿಗೆ

ಮನೆ ಖಾಲಿಮಾಡಿಬಿಡಿ - ಇಲ್ದೇ ಹೋದ್ರೇ ಅವನು ಹೀಗೇ ಮಾಡ್ತಾನೇಂತ ಈಗಲೆ ಹ್ಯಾಗೆ ಹೇಳ್ಲಿ"

"ದೈವೇಚ್ಛೆ .. ರುಕ್ಕೂ ಡಾಕ್ಟರ ಸ್ನಾನವಾಯ್ತೆ - ನೀರು ತೋಡು ಅವರಿಗೆ"

—ಈ ಮಾತಿಗೆ ನಾಗವೇಣಿಗೆ ನೆತ್ತಿಕಾಯಿತು. "ಅವರು ರೂಮಲ್ಲಿ ಮಲಗಿದ್ದಾರೆ ಅಲ್ಲಿಗೆ ಈ ಮಾರಿ ಕಾಲಿಟ್ರೆ ಕಾಲು ಮುರಿದು ಕೈಗೆ ಕೊಟ್ಟೇನು ..." ಎಂದು ಸಿಂಹಿಣಿಯಂತೆ ಸೆರಗು ಅಡ್ಡಕಟ್ಟಿದಳು. ಇಂತಹ ಪ್ರಸಂಗ ರುಕ್ಕು ಎದುರಿಸಿರಲೇ ಇಲ್ಲ. "ಅಪ್ಪಾ" ಎಂದು ದೊಡ್ಡ ಧ್ವನಿಯಲ್ಲಿ ಅತ್ತಳು. ನಾಯಿ ರೂಮಿ ಬೌ ಗುಟ್ಟಿತು. ಬಾಣಸಿಗ ಒಂದೇಸಮ 'ರಾಯರೆ ರಾಯರೆ' ಎಂದು ಕೂಗುತ್ತಲೇ ಇದ್ದ ವೆಂಕಟಕೃಷ್ಣ "ಬೆಬೆಬೆಬೆ" ಎಂದು ಏನೋ ಹೇಳಲು ಬೆಗುಟ್ಟುತ್ತಿದ್ದ. ನಿಜವಾಗಲೂ ವಿಠ್ಠಲರಾಯರು ದೊಡ್ಡ ಸಮರಕ್ಕೇ ಸನ್ನಾಹಗೊಂಡಂತಿದ್ದರು. ಈ ಎಲ್ಲ ಗುಂಪಿನ ಗಲಾಟೆಯಲ್ಲಿ ಗೋವಿಂದ ಎಂದು ಡಾ|| ದಾಮೂರವರು ಔನ್ಸುಗ್ಲಾಸಿಗೆ ಬ್ರಾಂದಿ ಸುರುವಿ ಮತ್ತೆ ಗುಟುಕರಿಸಿದರು. ಕಣ್ಣು ಕೆಂಪಾಯಿತು ದೇಹ ತೂರಾಡುತ್ತಾ ಹೊರಹೊಂಟನಾಬಂಟ ನಡುಮನೆಗೆ.

—ಇದೇ ಸಮಯಕ್ಕೆ ಹೊರಗಿನಿಂದ ಗೇಟು ತೆಗೆದ ಸಪ್ಪಳವಾಯಿತು. ನಾಯಿ ಅತ್ತಕಡೆ ಓಡಿತು. ಬಂದವನು ಸಂಜೀವಯ್ಯ, ಸುಂದರಮ್ಮನ ಗಂಡ, ನಾಗವೇಣಿಯ ಅಪ್ಪ. ಇವನದು ಸೈಂಧವ ಆಕಾರ. ಆರೂವರೆ ಅಡಿ ಎತ್ತರದ ಭೀಮಾಕಾರಿ. ಬಹು ಸಿಟ್ಟು, ಮಾತು, ಕಡಿಮೆ ಏಟೇ ಮುಂದು, ಸದಾ ಮುಷ್ಟಿ ಬಿಗಿ ಹಿಡಿದೇ ಇರುತ್ತಿದ್ದ. ಏಟು ತಿನ್ನಲು ಯಾರೂ ಸಿಕ್ಕದೆ ಬೇಸರವಾದಾಗ ಸುಂದರಮ್ಮನ ಮೂಳೆಯನ್ನೇ ಮುರಿಯುವವನು. ಅವನ ಕಣ್ಮಣಿ ನಾಗವೇಣಿಯನ್ನು ಕಂಡರೆ ಮಾತ್ರ ಮಮತೆ. ಅಂದಮೇಲೆ ಆ ನಾಗವೇಣಿಯ ಪ್ರಿಯನನ್ನು ನರಿಯೊಂದು ಹಾರಿಸುತ್ತಿದೆ ಎಂದರೆ ಬಂದೂಕು ತಾರದೆ ಇರಲಾಗುತ್ತದೆಯೆ?

ನಾಯಿ ಬೌ ಎಂದು ಹಾರಿದಾಗ ಹೆಗಲಮೇಲಿನ ಬಂದೂಕ ಹಿಂದು ಮುಂದು ಮಾಡಿ ಮಡುಗಿದ. ಆದರೆ ಇಂತಹ ಏಟನ್ನೇ ತಿಂದಿರಲಿಲ್ಲ ರೂಮಿ, ಗಿರಿಗಿರಿ ತಿರುಗಿ ಒರಗಿತು ಪ್ರಾಣಿ. ಅದರ ಚೀತ್ಕಾರ ಕೇಳಿ ತತ್ತರಿಸಿದರು ವಿಠ್ಠಲರಾಯರು.

ಅದೇ ಬಂದೂಕಿನ ತುದಿಯಿಂದ 'ವಕೀಲ್ ವಿಠ್ಠಲ'ನ ಬೋರ್ಡು ಬಡಿದು ಹಾಕಿದ. ಪ್ರಳಯಾಂತಕನಂತೆ ಒಳಹೊಕ್ಕಾಗ ಸಂತೆಯಂತಿದ್ದ ಮನೆಯಲ್ಲಿ ಮಸಣದ ಮೌನ ಮುತ್ತಿತು. 'ಅಕ್ಕಾ ಹೆದರಬೇಡ' ಎಂದು ಅಭಯ ನೀಡಿದ ತುಂಗಮ್ಮನಿಗೆ.

"ನೀನೇನೊ ವಕೀಲ್ ವಿಠ್ಠಲ್‌ರಾಯ" ಎಂದಾಗ, ಆ ಧ್ವನಿಯಲ್ಲಿ ಭಂಡರಿಗೆ ದಂಡವೇ ಸರಿ ಎಂಬ ನಿರ್ಧಾರವಿತ್ತು. ಆ ಚಾಣಾಕ್ಷನ ಗುಂಡಿಗೆ ಕರಗಿ ನೀರಾಯಿತು. ಕೈಹೊಸೆದು ಅತಿ ವಿನಯದಿಂದ ಹೇಳಿದರು,

"ಹೌದು ಸ್ವಾಮಿ" ವಿಠ್ಠಲರು ಮಾತಿನಲ್ಲಿ ಪೆಟ್ಟುಕೊಟ್ಟವರಲ್ಲದೆ ಏಟಿಗೆ ಮೊದಲಿಂದಲೂ ಹಿಂದೇಟು ಹಾಕಿದವರು.

"ಮೇರೇ ಮೌಲಾ ಬುಲಾ ..." ಎಂದು ಹಾಡಿದರು ಡಾ|| ದಾಮೋದರರರು ತೂರಾಡುತ್ತಾ.

"ದಾವ ಮೂ" ಎಂದು ಅಂತಃಕರಣದಿಂದ ಕಿರುಲಿದಳು ತುಂಗಮ್ಮ. "ಸಂಜೀವಿ ನೋಡು ದಾಮೂನ, ಇದಕ್ಕೆಲ್ಲಾ ಈ ವಿಠ್ಠಲರಾಯ ಈ ಕರೀಮೂತಿ ಆನೆಸೊಂಡ್ಲಿನ ರುಕ್ಕುವೇ ಕಾರಣ" ಎಂದರು.

"ಶುರುಮಾಡಲೇ ಅಕ್ಕಾ ..."

"ತಡವೇಕೆ ತಮ್ಮಾ ..."

'ಠ್ರ್ಯೊಂ' ಎಂದು ಮೊದಲು ಬೀದಿಗೆ ಹಾರಿದ್ದು ಎದುರುಗೋಡೆಯಮೇಲೆ ಒರಗಿದ್ದ ವಿಠ್ಠಲರಾಯರ ಫೋಟೊ. ಗಡಗಡ ನಡುಗಿದನು ವಿಠ್ಠಲಭೂಪ.

"ಬಂದೂಕಿಗೆ ಗುಂಡು ಹಾಕಲೆ?"

"ಬೇಡ – ಅನಾವಶ್ಯಕ"

"ಹಾಸ್ಗೆ ಟ್ರಂಕು – ಮಗಳು ನಿನ್ನ ಪರಿವಾರ ನಿನ್ನ ನಾಯಿ ಹೆಣ ಈಗಲೇ ಸಾಗಿಸು"

"ಇಲ್ಲಾಂದವರು ಯಾರು? ಈಗಲೇ ಸಾಗಿಸೋಣ....ನಾನು ಹೊರಟೇ ಇದ್ದೆ ಡಾ|| ದಾಮೋದರೇ ಬೇಡವೆಂದರು–ರುಕ್ಕೂ ಹೊರಡಮ್ಮ–ವಿಠ್ಠಲಾ ಪಾಂಡುರಂಗ"

— ಬಾಣಸಿಗ ಕ್ಷಣಮಾತ್ರದಲ್ಲಿ ಸಾಮಾನು ಕಟ್ಟಿದ. ಅವನಿಗೆ ವಿಪರೀತ ಭಯ.

"ಹಾಕು ಬೆಂಕಿಲಿ ಉರಿಲಿ ಧಗಧಗ ಧರಿಸು ಖಾದಿ ಪವಿತ್ರವು–ಮೇರೇ ಮೌಲಾ ಬುಲಾ ..." ಎಂದು ಹಾಡುತ್ತಿದ್ದ ಡಾ|| ದಾಮುನ ನೆತ್ತಿಗೆ ನೀರುತಟ್ಟಿದ, ಸಂಜೀವ. ಜ್ಞಾನೋದಯವಾಯಿತು.

ನಾಗವೇಣಿ ನಕ್ಕಳು.

ಸುಂದರಮ್ಮ ತಿರುಪತಿ ತಿಮ್ಮನಿಗೆ ಶರಣೆಂದಳು.

ಸಂಜೀವಯ್ಯ 'ಊಟ' 'ಊಟ' ಎಂದು ತಹತಹಪಟ್ಟ.

ನಾಗವೇಣಿಯ ಹೆಗಲು ಮುಟ್ಟಿ–ಭಾರ್ಯಾ ರೂಪವತಿ ಎಂದ ಡಾ|| ದಾಮು.

ನಾಗವೇಣಿ ಅವನ ರೂಮಿಗೆ ಹೋಗಿ ಅವನ ಫೋಟೊ ಜೊತೆಗಿದ್ದ ರುಕ್ಕು ಫೋಟೊ ಉಕ್ಕಿದ ಸಿಟ್ಟಿನಿಂದ ಎಸೆದಳು.


"ನಾಗವೇಣೀ – ಎಲ್ಲಾ ಸರಿ – ತಲೆ ಮಾತ್ರ ಕಪ್ಪಿರಬೇಕಿತ್ತು — " ಎಂದ ಡಾ|| ದಾಮು.

"ಅದಕ್ಕೇ – ಈ ವಿಠ್ಠಲ ಶನಿ ಮಗಳ ಕರೀ ಕೂದಲೂಂತ ಕರಿಮುಖವಾದರೂ ಪರವಿಲ್ಲಾಂದ್ಯಾ! ಅದಕ್ಕೆನೇ ನಾಗೂ ನಾಳಿನಿಂದ ನೀನೂ ತಲೆಗೆ ಕರಿರಂಗು ಬಳಿಯೆ ರುಕ್ಕು ಹಾಗೇ...." ಎಂದದ್ದು ಸುಂದರಮ್ಮ ರುಕ್ಕುವಿನ ಫೋಟೊ ಹಿಂದಿದ್ದ ಬಣ್ಣದ ಸೀಸಿ ನೋಡಿ.

ಎಲ್ಲರೂ ನಕ್ಕರು. ಕಡೆಗೆ ತುಂಗಮ್ಮನೂ ನಗುವನ್ನು ಮಿತಿಮೀರಿ ಕಣ್ಣಂಚು ಒರೆಸಿದರು.

— ದಾಶರಥಿ ದೀಕ್ಷಿತ್.

—: ಮಂಗಳಂ :—



ಬಟ್ಟೆ ಗಂಟು ಹೊತ್ತುಕೊಂಡು ಖುಷಿಯಿಂದ ನಕ್ಕರೆ! ಆ 'ಪ್ರಾಣಿ' ಮುಖ ಕಂಡ ಹಾಗೆ ಆಗುತ್ತಲ್ಲವೇ.

ಅಜ್ಜಿ ಆಸ್ತಿ-ಲಂಬೋದರ

(ನಗೆನಾಟಕಗಳು)

ಕೊರವಂಜಿ ಗರುಡಿಯಲ್ಲಿ ಸಾಧನೆ ಮಾಡಿದ ಇಸಮು ಈ ನಾಟಕಗಳ ಕರ್ತೃ. ನಮ್ಮ ಗರಡಿಯ ವಸ್ತಾದಿಯ ಪಟ್ಟು, ವರಸೆ ನೋಡೋಕೆ ನಮಗೆ ಬಹು ಹಿತ. ನಮ್ಮ ಮಗುವಿನ ಆಟ ನೋಡಿ ಹೆಮ್ಮೆಪಟ್ಟ ಹಾಗೆ. ಹಿಂದೆ ಇದೇ ವಸ್ತಾದಿಯ ನಗೆಬರಹ ಸಂಗ್ರಹ 'ಪ್ರೇತಸಂಹಾರ' ಬಂದಾಗ (ಆಗಿನ್ನೂ ನಮ್ಮ ಗರುಡಿಗೆ ಬಂದ ಹೊಸದು) ಈ ಎಳೆಗರು ಎತ್ತಾಗುವ ಸೂಚನೆ ಕಾಣುತ್ತಿದೆ ಎಂದು ಎಚ್ಚರಿಕೆ ಕೊಟ್ಟಿದ್ದೆವು. ಇದು ಗೂಳಿಯಾದದ್ದು ಹೆಮ್ಮೆಯ ವಿಷಯ. ನಮ್ಮ ಗರುಡಿಯ ಮಟ್ಟಿಯಲ್ಲಿ ಮಾತ್ರ ಪಟ್ಟುಹಾಕಿ ಸೆಣಸಾಡುವನೆಂದು ನಂಬಿದ್ದೆವು ಆದರೆ ಗೂಳಿ ಗೂಳಿಯಷ್ಟೆ-ನಾಟಕ ರಂಗದಲ್ಲೂ ನುಗ್ಗಿತು.

ಅಜ್ಜಿ ಆಸ್ತಿ- ಕೋದಂಡ ನಂಜುಂಡ ದಾಯಾದಿ ಜಗಳ, ಅಜ್ಜಿಗೆ ಅಂತ್ಯ ಕಾಲವನ್ನೇ ತಂದಿತು. ಗೌರಿ-ಕಾಮಾಕ್ಷಿ ಕಿತ್ತಾಡಿದರು. ಚಿದಂಬರ ಎರಡುತಲೆ ಹಾವು. ಅಂತೂ ಇಂತೂ ಸಂಪತ್ತುಗೆ ಸಂಜೆಗವಳ ಅಂದಹಾಗೆ ಕಡೆಗೆ ಕೋದಂಡ ನಿಗೆ ದಕ್ಕಿದ್ದು ಅಜ್ಜಿ ಆಸ್ತಿಯಲ್ಲ-ಅಸ್ಥಿ, ಎನ್ನುವ ವಿಷಯವನ್ನೊಳಗೊಂಡು ನಮ್ಮ ಪೈಲ್ವಾನ್ ಸೊಗಸಾಗಿ ಆಟ ಆಡಿದ್ದಾನೆ. ಮಾತಿನವರಸೆ-ನಗೆಯ ರೀತಿ ನವೀನ ವಾಗಿದೆ.

ಲಂಬೋದರ-ತರ್ಲೆ ಸಂಗೀತಗಾರರ ಸಂಕಟದ ಅವ್ಯವಸ್ಥೆಯನ್ನು ವಿಡಂಬ ನೆಯ ರೂಪದಲ್ಲಿ ತೋರಿಸುವ ನಾಟಕ. ನಮ್ಮ ವಸ್ತಾದಿ ಇಲ್ಲಿಕೂಡ ತನ್ನದೇ ಆದ ಶೈಲಿ-ವರಸೆ-ರೀತಿ-ನೀತಿಗಳನ್ನು ಪ್ರತಿಪಾದಿಸಿದ್ದಾನೆ. ತಂಬೂರಿ ತಮ್ಮಯ್ಯ, ಲಂಬೋದರ ಭಾಗವತರು ಕೆ. ಕೆ. ವೆಂಕಪ್ಪಯ್ಯ ಓದುಗರನ್ನು ನಗೆಗಡಲಲ್ಲಿ ತೇಲಿಸುವಂತಹ ವ್ಯಕ್ತಿಗಳು. ಕನ್ನಡ ಪ್ರಹಸನ ಪ್ರಪಂಚದಲ್ಲಿ ಇದೊಂದು ಹೊಸ ಹಾದಿಯನ್ನು ತೆರೆದಿದೆ ಎಂದು ಹೇಳಬಹುದು. ನಮ್ಮ ವಸ್ತಾದಿ ಎಂದು ಅಭಿ ಮಾನಕ್ಕೆ ಹೇಳುವ ವಿಚಾರವಲ್ಲ. ನಿಜಕ್ಕೂ ತುಂಬಾ ಹಾಸ್ಯಮಯ ನಾಟಕ ಲಂಬೋದರ.

ಈ ಸೂಕ್ಷ್ಮ ತಿಳಿದು ಓದುಗರು-ಆಡುಗರು ಸದುಪಯೋಗಪಡಿಸಿಕೊಳ್ಳುವ ರೆಂದು ನಮ್ಮ ನಂಬಿಕೆ. ಇನ್ನು ನಮ್ಮ ವಸ್ತಾದಿಗೆ ಏನೂ ಮಾಡಲಾರೆವು-ಎಲ್ಲ ಪಹಿಲ್ವಾನರಂತೆ ನಾವೂ ಹಾರಹಾಕಿ ಹೆಗಲಮೇಲೆ ಕೂಡಿಸಿಕೊಂಡು ಥೋಡ ತೋಡಿಸಿ ತಮಟೆ ಬಡಿಸಬೇಕಷ್ಟೆ.

ಈ ಸೂಕ್ಷ್ಮ ತಿಳಿದೇ ಆತ ಗರುಡಿಯತ್ತ ಈಚೆಗೆ ಸುಳಿಯುತ್ತಲೇ ಇಲ್ಲ. ಎಲ್ಲಿ ಹೋಗ್ತಾನೆ ನೀರಿಗೆ ಬಾರದೆ ಉಂಟೆ?

—ಸೂತ್ರಧಾರಿ.

ರಕ್ಷಣೆ ಮತ್ತು ಸೇವೆಗೆ

ಮೈಸೂರು ಸರ್ಕಾರದ ವಿಮಾ ಇಲಾಖೆಯಲ್ಲಿ ವಿಮೆ ಮಾಡಲು ಈ ದಿನವೇ ನಿರ್ಧರಿಸಿರಿ.

ಅನೇಕ ವರ್ಷಗಳ ನಂಬಿಕೆ, ನಿರಂತರ ಸೇವೆ ಮತ್ತು ಸಹಕಾರಗಳನ್ನು ನೀಡಿ ತನ್ನದೇ ಆದ ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ.

★ ಇಂಡಿಯಾದಲ್ಲೇ ಹೆಚ್ಚಿನ ದರದ ಬೋನಸ್ಸು.
ಹೋಲ್ ಲೈಫ್ 20 ರೂ.ಗಳು
ಎಂಡೋಮೆಂಟ್ 17 ರೂ.ಗಳು.

★ ಸಮಸ್ತ ಜನರಿಗೂ ಅನುಕೂಲವಾಗುವಂಥ ಹೊಸ ಬಗೆಯ ವಿಮಾ ಪದ್ಧತಿಗಳನ್ನು ಜಾರಿಗೆ ತರಲಾಗಿದೆ.

★ 1955ನೇ ಇಸವಿ ಫೆಬ್ರವರಿ 1ರಿಂದ ಪ್ರೀಮಿಯಂ ದರಗಳಲ್ಲಿ ಹೆಚ್ಚಿನ ಇಳಿತಾಯ.

ಇಲಾಖೆಗೆ ಪಾವತಿ ಮಾಡಬೇಕಾದ ಹಣವನ್ನು ಇಲಾಖೆಯ ಕ್ಯಾಷ್ ಸೆಕ್ಷನ್ನಿನಲ್ಲಿ ಸ್ವೀಕರಿಸಲಾಗುತ್ತದೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ:....

ಸೆಕ್ರೆಟರಿ,

ಮೈಸೂರು ಸರ್ಕಾರದ ವಿಮಾ ಇಲಾಖೆ,

ಬೆಂಗಳೂರು.

ಅಥವಾ

ನಿಮ್ಮ ಹತ್ತಿರವಿರುವ ಏಜೆಂಟರನ್ನು ವಿಚಾರಿಸಿ.



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,

ಮಲ್ಲೇಶ್ವರಂ - - - ಬೆಂಗಳೂರು 3.

REG. No. M. 4718 KORAVANJI, JUNE 1955

Printed by B S. Iyengar, Bangalore City.
Publisher—B N. Gupta. Editor—M. Sivaram.